हरिः ॐ

ಭೀಮಸೇನ ವಿಲಾಸ

...ಚಕವಧಕಥಾ.

...೧೮೪೮

Price: 0-4-... [ಕ್ರಯ: ೦-೪-೦.

हरीः

संगं त्यजेत मिथुन वृजिनान्मुमुक्षुः सर्वा
त्मनानविसृजेत् बहिरिंद्रियाणि ॥
एकश्चरन् रहसिचित्तमनंतईशे युंजीत
तद्व्रतिषु साधुषु चेत्प्रसंगः –भागवत ८।७।५२

ಉಪೋದ್ಘಾತ.

ಅಷ್ಟೈಶ್ವರ್ಯಪ್ರದನಾದ ಸೃಷ್ಟಿಕರ್ತೃನ ದಯೆ ರೆಗೆ ಯಿಂದ ಈ ಅಷ್ಟಮ ಸುಮನಸವನ್ನು ಇಷ್ಟಾರ್ಥ ಪ್ರದವಾದ ಶ್ರೀ ಹರಿಕೀರ್ತನಮಾಲೆಗೆ ಕಟ್ಟುವಾ ಸಮಯವು ಒದಗಿಸಿದ್ದಕ್ಕಾಗಿ ಶ್ರೀ ಪರಮೇಷ್ಠಿ ಜನಕನೊ ಗೆಯೆ ಸಾಷ್ಟಾಂಗಪ್ರಣಾಮಗಳನ್ನು ಮಾಡಿ, ದುಷ್ಟಜನ ಮರ್ದಕನಾದ, ಮುಷ್ಟಿಕಹನು, ಮನ್ನಿಷ್ಟ ಅಷ್ಟಮದಗಳನ್ನು ಮರ್ದಿಸಲೆಂದು ಈ ಅಷ್ಟಮ ಸುಮನಸಗತ ಶ್ರೇಷ್ಠವಾದ ಉತ್ಕೃಷ್ಟ ಪರಿಮಳವನ್ನು ಶ್ರಿಷ್ಟೇಷ್ಠನಿಗೆ ಅರ್ಪಿಸುವ.

ಲೋಕದಲ್ಲಿ ನಮ್ಮಂಥ ದುಷ್ಟಜನರು ಖ್ಯಾತಿಕಾಮುಕ ರಾಗಿ, ಅಷ್ಟ ಮದದಿಂದ ಒಬ್ಬರನ್ನೂ ಲೆಕ್ಕಿಸದೆ ತಮ್ಮ ದುಷ್ಟ

ಸ್ವಭಾವವನ್ನೇ ಕ್ಷಣೆಕ್ಷಣೆ ಪ್ರಕಟಿಸಿ ಅಜಿತೇಂದ್ರಿಯರಾಗಿಯೂ, ನಿರ್ಲಜ್ಜರಾಗಿಯೂ, ಸ್ಥಾನಾಸ್ಥಾನಗಳನ್ನರಿಯದೆ, ಕಾಮುಕತನದಿಂದ, ತಮಗಿಂತಲು ಉತ್ತಮರಲ್ಲಿಯೂ ಬಲಿಷ್ಠರಲ್ಲಿಯೂ ಲೋಕರಿಗೆ ಇಷ್ಟವಾಗದೆ ಇದ್ದ ಕಾರ್ಯವನ್ನು ಮಾಡತೊಡುಗುವರು. ಇದು ಪ್ರತ್ಯಕ್ಷವಾದದ್ದು. ಕಾರಣ ಮುಮುಕ್ಷುಗಳಾದ ಜನರುಗಳು, ಅಜಿತೇಂದ್ರಿಯರಾಗಿ ಕಾಮಿಗಳೆನಿಸಿ ವಿಷಯ ಸಂಗದಲ್ಲಿ ಸರ್ವಥಾ ಇರಕೂಡದು ಎಂಬುವ (ಇಂದ್ರಿಯ ಜಯಾಖ್ಯ) ಭಾಗವತ ಧರ್ಮವನ್ನು ತಿಳಿಸಲೋಸುಗ ಶ್ರೀಮತ್ಪೂಜ್ಯ ಶ್ರೀ ಪ್ರಾಣೇಶ ದಾಸಾರ್ಯರು, ದುಷ್ಟ ಕೀಚಕ... ಆದ ಕೆಟ್ಟ ಪರಿಣಾಮವನ್ನಾದರೂ ತಿಳಿದು, ವಿಷಯಲೋ... ಪರಾಗಬೇಡಿರೆಂದುದು ಹೃದಯಂಗಮವಾಗಿ ವರ್ಣಿಸಿರುವರು.

ಕಾಮಾಂಧ ಕೀಚಕ ದುಷ್ಟನಿಗ್ರಹವೆಂಬ, ಈ ಅ... ...ಪ್ಪವು, ಶ್ರೀಮನ್ ಮಹಾಭಾರತ ವಿರಾಟಪರ್ವ ಕಥಾ... ...ಮವಾಗಿ ಶ್ರೀಮದಾಚಾರ್ಯರು ರಚಿಸಿದ ಭಾರತ ತಾ... ...ರ್ಯನಿರ್ಣಯ ೨೩ನೇ ಅಧ್ಯಾಯದಲ್ಲಿ ವಿವರಿಸಿರುವ ಕೀಚ... ವಧವೆಂಬ ಭೀಮಸೇನ ವಿಲಾಸವು.

ಈ ಕಥೆಯನ್ನು ಶ್ರೀಮತ್ಪೂಜ್ಯ ಶ್ರೀ ದಾಸಾರ್ಯ... ಕಾಮುಕರ ಹೃದಯಭೇದಕವಾಗಿಯೂ, ನಿಷ್ಕಾಮಿ ಜನ... ಮನೋಲ್ಲಾದಕವಾಗಿಯೂ, ಬಹು ಚಮತ್ಕಾರವಾ... ಲೌಕಿಕ ದೃಷ್ಟಾಂತಗಳೊಂದಿಗೆ ಸುಗಮವಾಗಿ ಮಂ... ರಿಗೆ ಬೋಧವಾಗುವಂತೆ ಸರಸವಾಗಿ ರಚಿಸಿರುವರು. ಆದರ... ಶ್ರೀಮನ್ ಮಹಾಭಾರತ, ಮತ್ತು ತಾತ್ಪರ್ಯನಿರ್ಣಯದಲ್ಲಿ

ವಿವರಿಸಿರುವ ಕಥೆಗೂ, ಮತ್ತು ಶ್ರೀ ದಾಸಾರ್ಯರು ರಚಿಸಿದ ಕಥೆಗೂ, ಕೆಲಮಟ್ಟಗೆ ವ್ಯತ್ಯಾಸ ತೋರುವದು. ಇದರಿಂದ ಅನೇಕ ಜನರು ಅನೇಕ ಶಂಕೆಗಳನ್ನು ತೆಗೆಯಲಿಕ್ಕೆ ಆಸ್ಪದ ವಾಗಿ ಈ ವರಿಗೆ ಕೆಲವರು ಒಂದೆರಡು ಶಂಕೆಗಳನ್ನು ಸಹಾ ತೆಗದಿರುವರು.

ಈ ಶಂಕೆಗಳನ್ನು ದೂರಮಾಡಿಕೊಳ್ಳುವಗೋಸುಗ, ಅನೇಕ ಸಂಪ್ರದಾಯಜ್ಞರನ್ನೂ, ಮತ್ತು ಅನೇಕ ವಿದ್ವಾನ್ ಜನರನ್ನೂ ವಿಚಾರಿಸಲು, ಬಹುತರ ಎಲ್ಲ ಜನರು ಗ್ರಂಥಾಧಾರ ವಿಲ್ಲದೆ ಹೇಳುವದಾಗುವದಿಲ್ಲವೆಂದು ಅಭಿಪ್ರಾಯವನ್ನು ಕೊಟ್ಟರು. ಆದರೆ ಶ್ರೀ ಭೀಮಸೇನ ದೇವರು ಹೆಣ್ಣು ವೇಷವನ್ನು ಧರಿಸಿದ ಬಗ್ಗೆ ಮಾತ್ರ, ಶ್ರೀಯುತ ಮುದ್ದು ವಿಠ್ಠಲಾರ್ಯ ಗಲ ಗಲಿ ಇವರು ಕೆಲವು ಸಮಾಧಾನಗಳನ್ನು ತೋರಿಸಿರುವರು. ಅದನ್ನುಮುಂದೆ ವಿವರಿಸುವ; ಮತ್ತು ಕೆಲವು ದಿವಸಗಳ ವರೆಗೆ ಭಾರತ, ಚಂಪುಭಾರತಾದಿ ಅನೇಕ ಗ್ರಂಥಗಳನ್ನು ಶೋಧಿ ಸುತ್ತಿರಲು, ಅದರಿಂದಲೂ ವಿಶೇಷವಾಗಿ ಏನೂ ಸಹಾಯವಾ ಗಲಿಲ್ಲ. ಆದರೆ ಅಕಸ್ಮಾತ್ತಾಗಿ ಕನ್ನಡ ಪ್ರಖ್ಯಾತ ಕವಿಗಳೂ ಮಹಾ ಜ್ಞಾನಿಗಳೂ ಆದ ಕುಮಾರವ್ಯಾಸರ ಕನ್ನಡ ಮಹಾ ಭಾರತವು ಕೈಸೇರಿ ಕೆಲವು ಶಂಕಾಗಳಿಗೆ ಸಮಾಧಾನಗಳು ದೊರೆತದ್ದಕ್ಕಾಗಿ ಬಹು ಆನಂದವಾಯಿತು.

ಇಂತು ಈ ಮಹಾ ಕಾರ್ಯದಲ್ಲಿ ಈ ಪಾಮರನನ್ನು ನಿವೇ ಶಿಸಿರುವ ಆ ಆನಂದಮಯನಿಗೆ ಈಗುಂಟಾದ ಆನಂದ ವನ್ನರ್ಪಿಸಿ ಮುಂದೆ ಸಾಗುವ.

1

ಪ್ರಖ್ಯಾತ ಕನ್ನಡ ಕವಿಗಳೂ ಬ್ರಹ್ಮಜ್ಞಾನಿಗಳೂ ಆದ ಕುಮಾರವ್ಯಾಸರು (ನಾರಾಯಣಪ್ಪನವರು) ಕ್ರಿಸ್ತಶಕೆ ೧೬ನೇ ಶತಮಾನದಲ್ಲಿ ಅಂದರೆ ಈಗ ಮುನ್ನೂರು ವರ್ಷಗಳಿಗೆ ಮುಂಚಿತವಾಗಿ ಗದುಗಿನ ಶ್ರೀ ವೀರನಾರಾಯಣಾಂಕಿತದಿಂದ, ಸಂಸ್ಕೃತ ಶ್ರೀಮನ್ ಮಹಾಭಾರತವನ್ನು ಕನ್ನಡಿಸಿದರು ಎಂಬುವ ಸಂಗತಿಯು ಇತಿಹಾಸಪ್ರಸಿದ್ಧವಾಗಿದ್ದು ಸರ್ವರಿಗೂ ವಿದಿತವೆ ಇದೆ.

ಕುಮಾರವ್ಯಾಸರು ರಚಿಸಿದ, ಕನ್ನಡ ಭಾರತ ವಿರಾಟ ಪರ್ವ ಅಧ್ಯಾಯ ೩—೪ರಲ್ಲಿ ವಿವರಿಸಿರುವಂತೆ ಶ್ರೀ ದಾಸಾರ್ಯರು, ಶ್ರೀಮನ್ ಮಹಾಭಾರತ ಮತ್ತು ನಿರ್ಣಯಗ್ರಂಥದ ನಿರ್ಣಿತಾರ್ಥಕ್ಕೆ ವ್ಯತ್ಯಾಸಬಾರದಂತೆ ಬೋಧಪರವಾಗಿ ರಚಿಸಿರುವರು. ಕೆಲವು ಶಂಕೆಗಳಿಗೆ ಉತ್ತರಗಳು ಕುಮಾರವ್ಯಾಸರ ಕನ್ನಡ ಭಾರತದಲ್ಲಿಯೇ ದೊರೆಯುವವು. ಆದರೂ ಅವೆಲ್ಲ ಶಂಕೆಗಳ ಬಗ್ಗೆ ಶ್ರೀಶನು ಪ್ರೇರಿಸಿದಂತ ಯಥಾಮತಿಯಾಗಿ ವಿಮರ್ಶಿಸಿ, ಸಮಾಧಾನಗಳು ಬರೆಯಲೆತ್ನಿಸಿರುವೆನು. ಇದರಲ್ಲಿ ಏನಾದರು ದೋಷಗಳಿದ್ದಲ್ಲಿ ವಾಚಕ ಮಹಾಶಯರು ಕ್ಷಮಿಸಿ ತಿಳುಹಿಸಬೇಕೆಂಬದಾಗಿ ಕೋರುತ್ತೇನೆ.

ಶ್ರೀಮತ್ಪೂಜ್ಯ ಶ್ರೀ ದಾಸಾರ್ಯರು ಲೌಕಿಕ ದೃಷ್ಟಾಂತ ರೀತ್ಯಾ ಜನರಿಗೆ ಅಸಹ್ಯವಾಗಿ ತೋರದೆ ಯಾವ ಯಾವ ಸಂದರ್ಭದಲ್ಲಿ ಯಾವ ರಸವಿರಬೇಕೋ ಅದನ್ನನುಸರಿಸಿಯೇ ಶ್ರೀ ಕುಮಾರವ್ಯಾಸರ ಭಾರತ ಕಥಾನುಕ್ರಮವಾಗಿ ಬೋಧಪರವಾಗಿ ರಚಿಸಿರುವರೆಂಬುದನ್ನು ವಾಚಕರು ಮರೆಯಬಾರ

ಧೆಂದು ಬಿನ್ನೈಸಿ ಮುಂದೆ ಶಂಕಾ-ಸಮಾಧಾನಗಳ ಬಗ್ಗೆ ವಿಮರ್ಶಿಸುವ.

೧ ಶಂಕಾ.

ಮೂಲಭಾರತದಲ್ಲಿ 'ಮಧು' ಎಂಬುವ ಶಬ್ದವು ಉಪಯೋಗಿಸಿಲ್ಲ. ಸುಧೇಷ್ಣಿಯು ಪಾನಾರ್ಹವಾದಂಥಾ ಮದ್ಯವನ್ನು ಕೀಚಕನ ಮನೆಯಿಂದ ತೆಗೆದುಕೊಂಡು ಬಾ ಎಂದು ಸೈರೇಂಧ್ರಿಗೆ ಹೇಳಿರುವಳು. ಆದರೆ ದಾಸರಾಯರು, ಮಧು ತೆಗೆದುಕೊಂಡು ಬಾ ಎಂತ ಪ್ರಯೋಗ ಮಾಡಿರುವರು.

೧ ಸಮಾಧಾನ.

ಈ ಕಲಿಯುಗದಲ್ಲಿ ಸುರಾ ಸಾಧಾರಣವಾಗಿ ನಿಷಿದ್ಧವಾಗಿದೆ. ಬೋಧಪರವಾಗಿ ಉಪದೇಶಿಸುವ ಸಮಯದಲ್ಲಿ ಮುಮುಕ್ಷುಗಳಾದ ಶ್ರೋತ್ರಿಯ ವರ್ಗಕ್ಕೆ ಅಸಹ್ಯ ತೋರಿ ಮನಸ್ಸಿನ ಮೇಲೆ ಕೆಟ್ಟ ಪರಿಣಾಮವಾಗಬಾರದೆಂದು ಸುಧೇಷ್ಣಾದೇವಿಯು (ದ್ರೌಪದಿ ದೇವಿಯರಿಗೆ) ಸೈರೇಂಧ್ರಿಗೆ ಕೀಚಕನ ಮನೆಗೆ ಹೋಗಿ ಮಧು ತೆಗೆದುಕೊಂಡು ಬಾ ಎಂತ ಆಜ್ಞಾಪಿಸಿದಳೆಂದು ಶ್ರೀ ಕುಮಾರವ್ಯಾಸರು ಮತ್ತು ದಾಸಾರ್ಯರು ವರ್ಣಿಸಿರುವದು ಬಹು ಸಮಂಜಸವಾದದ್ದು. ಯಾಕಂದರೆ ಅಮರಕೋಶ ತೃತೀಯಕಾಂಡ ನಾನಾರ್ಥ ವರ್ಗದಲ್ಲಿ

मधुमद्ये पुष्परसे क्षौद्रप्यंधतमस्यपि

ಮದಜನಕವಸ್ತು, ಮಕರಂದ, ಜೇನು, ಚೈತ್ರಮಾಸ, ಮಧುವೆಂಬ ರಾಕ್ಷಸ, ಹಿಪ್ಪೆ ಗಿಡ, ಕತ್ತಲು ಇತ್ಯಾದಿ ಅನೇಕ ವಸ್ತುಗಳ ಹೆಸರಿರುವವು, ಕಾರಣ ಶ್ರೀಮತ್ಪೂಜ್ಯ ದಾಸಾ

ರ್ಯರು. ಶ್ರೀ ತಾತ್ಪರ್ಯನಿರ್ಣಯಕ್ಕೆ ವ್ಯತ್ಯಾಸಬಾರದಂತೆ ಮತ್ತು **समानयाश्चैवसुरां मदर्थमिती रितानेति भीतऽवदत्सा,** ಎಂಬುವ ಶ್ಲೋಕಕ್ಕೆ ಅನುಸರಿಸಿಯೇ ಈಗಿನ ಜನರುಗಳಿಗೆ ಸರಿಯಾಗಿ ತೋರುವಂತೆ ಪಾನಾರ್ಹವಾದ ಮಧುವೆಂದು ಹೇಳಿರುವರು. ಕಾರಣ ವಿಶೇಷ ಸಂದೇಹಕ್ಕೊಳಗಾಗುವ ಕಾರಣವಿಲ್ಲ.

೨ನೇ ಶಂಕಾ.

ಭೀಮಸೇನ ದೇವರು, ನರ್ತನಾಗಾರಕ್ಕೆ ಹೋಗುವ ಮುಂದೆ ಹೆಣ್ಣು ವೇಷವನ್ನು ಧರಿಸಿದರೆಂದು ಭಾರತದಲ್ಲಿ ಹೇಳಿಲ್ಲ. ತಾತ್ಪರ್ಯನಿರ್ಣಯುದಲ್ಲಿಯೂ ಇಲ್ಲ. ಆದರೆ ದಾಸಾರ್ಯರು ಹೆಣ್ಣು ವೇಷವನ್ನು ಭೀಮಸೇನನು ಧರಿಸಿದ್ದು ಬಹು ವಿಸ್ತಾರವಾಗಿ ವರ್ಣಿಸಿರುವರು. ಆ ಕಾಲದಲ್ಲಿ ಭೀಮಸೇನ ದೇವರಿಗೆ ಸ್ತ್ರೀ ವೇಷವನ್ನು ಧರಿಸಲಿಕ್ಕೆ ಇಷ್ಟು ಆಭರಣಗಳಾದರೂ ಎಲ್ಲಿಂದ ಬಂದವು ಎಂದು ದೊಡ್ಡ ಸಂಶಯುವೇ ತೋರುವದು ನಿಜ. ಆದರೆ:—

೨ ಸಮಾಧಾನ.

ಶ್ರೀ ಭೀಮಸೇನ ದೇವರು ಸ್ತ್ರೀವೇಷವನ್ನು ಧರಿಸಿದ್ದರೆಂದು ಕುಮಾರವ್ಯಾಸರು ಬಹು ರಮ್ಯವಾಗಿ ವರ್ಣಿಸಿರುವರು. ವಿರಾಟಪರ್ವ ಅಧ್ಯಾ. (೪) ಶ್ಲೋಕ (೮೦)

ಖಳನ ಮುರಿಯುಂದಬಲೆ ಸೊಸಲಲಿ।
ತಿಲಕವನು ರಚಿಸಿದಳು ಸೇಸೆಯು।
ತಳಿದಳೇರಿಸಿ ತಿಗುರಗೆಲಿದಳು ಹೆಣಲ ಹೊಸ ಪರಿಯಾ॥

ಬಲುಭುಜನ ಹರಿಸಿದಳು ಕಗ್ಗ।
ತ್ತಲೆಯೊಳಗೆ ಹಬ್ಬುಗೆಯ ನಾಟ್ಯದ।
ನಿಳಯ ಮಧ್ಯದ ಮಣಿಯ ಮಂಚದ ಮೇಲೆ ಪವಡಿಸಿದ ॥ ೧ ॥

ಮತ್ತು ಸಾಕ್ಷಾತ್ ಭಾವಿ ವಾಯು ಪದಸ್ಥರೂ ಲಾತವ್ಯರೂ ಋಜುಗಳೂ ಆದ ಶ್ರೀಮದ್ ಸ್ವಾದಿಗುರುರಾಜರಾದ ಶ್ರೀ ವಾದಿರಾಜ ಸ್ವಾಮಿಗಳು ಕನ್ನಡ ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ.

"ಇತ್ತಕಡೆಗೆ ಕೀಚಕಗೆ ಈ ಪ್ರಕಾರ ನರ್ತನಾಗಾರಕ್ಕೆ ಬರ ಹೇಳಿ ಬಂದಿದ್ದೇನೆ"ಂದು ಭೀಮಸೇನಗೆ ಶೃತಿಗೊಳಿಸಲಾಗಿ ಆ ಕ್ಷಣಕ್ಕೆ ಸ್ತ್ರೀರೂಪ ನಾಗಿ ಸರ್ವಾಲಂಕಾರಭೂಷಿತನಾಗಿ ದ್ರೌಪದಿಯನ್ನು ಹಿಂದಿಟ್ಟುಕೊಂಡು ನೃತ್ಯಾಗಾರಕ್ಕೆಬಂದನು. ಅಲಂಕಾರಗಳು ಎಲ್ಲಿದ್ದವು ಎಂದರೆ ಅಣಿಮಾದಿ ಯೋಗಸಾಮರ್ಥ್ಯ ಉಳ್ಳಂಥಾದಾವ ಋಷಿಗಳಲ್ಲಿ ಏನು ಬೇಡಿದ್ದು ಪ್ರಾಪ್ತಿ ಆಗುವಂಥಾ ಮಹಿಮೆ ಉಂಟು. ಆದಮೇಲೆ ಈ ಭೀಮಸೇನಗೆ ಇದೇನು ಆಶ್ಚರ್ಯವಲ್ಲ. ಈ ಪ್ರಕಾರ ಶ್ರಿಂಗಾರವಾಗಿ ಬಂದಂಥಾ ವಾಯುಪುತ್ರ ನನ್ನು (ಮುಂದೆ ಎರಡನೇ ಮಾತು ನಡೆದಿರುವವು).

ಈ ಪ್ರಕಾರವಾಗಿ ಸವಿಸ್ತಾರ ವಿವರಿಸಿರುವರು. ಅಂದ ಮೇಲೆ ಸಂದೇಹಗೊಳ್ಳುವದು ವ್ಯರ್ಥ. ಮಹಾ ಜ್ಞಾನಿಗಳೂ ಋಜುಯೋಗಿಗಳೂ, ತಮ್ಮ ಸಾಧನಕಲ್ಪಗಳಲ್ಲಿ ಆಗ್ಗೆ ಭೀಮ ಸೇನನು ಸ್ತ್ರೀರೂಪವನ್ನು ಧರಿಸಿದ್ದು ಜ್ಞಾನ ಮತ್ತು ಯೋಗ ಬಲದಿಂದ ನೋಡಿದವರು ಅನೇಕ ಉಪಪುರಾಣಗಳ ಸಹಾಯ ದಿಂದ ಭಾರತನಿರ್ಣಯವನ್ನು ಕನ್ನಡಿಸಿರುವರು. ಇದಕ್ಕೂ ಹೆಚ್ಚಿನ ಪ್ರಮಾಣ ಬೇಕಿಲ್ಲ. ಆದರೂ ಭಾರತದಲ್ಲಿ:—

एवमुकत्वा महाबाहु स्तत्र पांडव नंदनः
अवदातेनमृदुना पटेनाच्छादितस्तदा ॥
द्रौपदीं पृष्टतः कृत्वा यत्रासीन्नर्तनालयः ।
स भीमप्रथमंगत्वा तमिस्रायामुपाविशत् ॥

ಇದರಲ್ಲಿ ಭೀಮಸೇನ ದೇವರು ನಿರ್ಮಲ ಕೋಮಲವಾದ ವಸ್ತ್ರದಿಂದ ಆಚ್ಛಾದಿತರಾಗಿ ದ್ರೌಪದಿಯನ್ನು ಹಿಂದುಮಾಡಿ ಕೊಂಡು ನರ್ತನಾಲಯವನ್ನು ಉದ್ದೇಶಿಸಿ ಪ್ರಯಾಣಮಾಡಿ ದರೆಂದು ಹೇಳಿರುವರು. ಆದರೆ ಭೀಮಸೇನ ದೇವರು ವಲ್ಲವ ವೇಷದಿಂದಲಿಯೇ ಸೈರೇಂಧ್ರಿಯ ಸಮೇತರಾಗಿ ಹೋಗಿದ್ದರೆ ಜನರಿಗೆ ಅನೇಕ ತರದ ಸಂಶಯಬಂದೀತೆಂದು, ವಸ್ತ್ರದಿಂದ ಆವೃತ್ತರಾಗಿ ಪ್ರಯಾಣಮಾಡಿರುವರು ಎಂದು ಅವಶ್ಯವಾಗಿ ಹೇಳಬೇಕು. ಇಲ್ಲದಿದ್ದರೆ पटेनाच्छादितस्तदा ಎಂಬ ಉಕ್ತಿಯು ಕೂಡುವದಿಲ್ಲಾ. ಆ ವಸ್ತ್ರವು ಪುರುಷೋಚಿತವಾದ ಪಕ್ಷದಲ್ಲಿ ಅಕಸ್ಮಾತ್ತಾಗಿ ಹಾದಿಯಲ್ಲಿ ಭೇಟಿ ಆದ ಜನರ ಸಂಶಯಕ್ಕೆ ಕಾರಣವಾಗುವದು. ಆದುದರಿಂದ ಭೀಮಸೇನ ದೇವರು ಧರಿಸಿದ ವಸ್ತ್ರವು, ಪುರುಷೋಚಿತ ವಸ್ತ್ರವಲ್ಲಾ ಸ್ತ್ರೀಯರಿಗೆ ಉಚಿತ ವಾದದ್ದೆಂದೆ ಹೇಳಬೇಕಾಗುವದು. ಅಂದಮೇಲೆ ಭೀಮಸೇನ ದೇವರು ಸ್ತ್ರೀಯರಿಗೆ ಉಚಿತವಾದ ವಸ್ತ್ರವನ್ನು ಧರಿಸಿದರೆಂದರೆ ಸ್ತ್ರೀವೇಷವನ್ನೇ ಧರಿಸಿದರೆಂದು ಹೇಳಬೇಕಾಗುತ್ತದೆ. ಹೀಗೆ ಹೇಳದೆಹೋದರೆ अवदातेन मृदुना पटेनाच्छादितस्तदा ಎಂಬುವ ಅರ್ಧ ಶ್ಲೋಕವು ವ್ಯರ್ಥವಾಗಿ ಹೋಗುವದು द्रौपदीं

पृष्ठतः कृत्वा यत्रा सीन्नर्तनालयः ಇಷ್ಟೇ ಅಂದಿದ್ದರೆ ಸಾಕಾಗಿತ್ತು. ಆದುದರಿಂದ ವಿವಿಧವಾದ ಸಂಶಯವು ಭೇಟಿಯಾದ ಜನರಲ್ಲಿ ಹುಟ್ಟಬಾರದೆಂದೂ ಮತ್ತು ಕಾಮಮದಾಂಧನಾದ ಕೀಚಕನಿಗೆ ಪುರುಷವೇಷವನ್ನು ಕಂಡು ಸಂಶಯವು ತೋರಬಾರದೆಂತಲೂ ಸ್ತ್ರೀವೇಷವನ್ನು ಭೀಮಸೇನ ದೇವರು ಧರಿಸಿ ಪ್ರಯಾಣಮಾಡಿರುವರು. ಈ ಭಾರತ ಶ್ಲೋಕಗಳಿಗೆ ಟಿಪ್ಪಣಿರೂಪವಾಗಿಯೇ ಶ್ರೀ ದಾಸಾರ್ಯರು ಭೀಮಸೇನ ದೇವರು ಸ್ತ್ರೀವೇಷವನ್ನು ಧರಿಸಿದರೆಂದು ವರ್ಣನೆಮಾಡಿರುವರು.

ಮತ್ತು ಶ್ರೀ ದ್ರೌಪದಿ ದೇವಿಯರಿಂದ ಮಂದಹಾಸಪೂರ್ವಕವಾಗಿ ಸಂಕೇತಸ್ಥಾನವನ್ನು ಉದ್ದೇಶಿಸಿ ಬರಹೇಳಿಸಿಕೊಂಡ ಕೀಚಕನು ಆತುರದಿಂದ ಭೀಮನ ಮಂಚವಿದ್ದೆಡೆಗೆ ಬಂದು ಸೈರೇಂಧ್ರಿ ಎಂದೇ ತಿಳಿದು ನಿನ್ನಗಾಗಿ ವಸ್ತ್ರಾಭರಣ ಪೂಮಾಲೆ ಇತ್ಯಾದಿ ಭೋಗದ್ರವ್ಯಗಳನ್ನು ತಂದಿರುವೆನು. ತೆಗೆದುಕೋ ಎನಲಾಗಿ ಭೀಮನು ईदृशस्तु मया स्पर्शोनोपलभ्य कदाचन ಮತ್ತು ಮುಂದೆ त्वयापिसुगुणानारीरूप शीलसमन्विता ॥ अदृष्टपूर्वां पश्य त्वं स्त्रियं यत्तच्च सूतज ॥ ಕೀಚಕನೇ ನಿನ್ನಿಂದಾ ಎಂದೂ ನೋಡಿಸಿಕೊಳ್ಳದೆ ಇದ್ದ ರೂಪಶೀಲದಿಂದಾಯುಕ್ತಳಾದ ಸ್ತ್ರೀಯನ್ನು ನೋಡು. ಈ ಶ್ಲೋಕದಿಂದ ಭೀಮನು ಭಾಮಿನಿವೇಷವನ್ನು ಸ್ವೀಕರಿಸಿದನೆಂದು ಒಪ್ಪಿಕೊಂಡರೆ ಈ ಭೀಮಸೇನನಮಾತು ಉಚಿತವಾಗುವದು. ಇರಲಿ; ಈ ಪ್ರಕಾರ ಭಾರತದಲ್ಲಿ ಸ್ವಲ್ಪ ಗುಪ್ತವಾಗಿ ಭೀಮನ ಭಾಮಿನಿವೇಷವನ್ನು ವರ್ಣಿಸಿರುವರು.

ಚಂಪುಭಾರತಕಾರರಾದರೂ ಭೀಮಸೇನ ದೇವರ ವಾಚನೀಕ ಸ್ತ್ರೀವೇಷವನ್ನು ಚಂಪುಭಾರತ ಆರನೇ ಸ್ತಬಕ ಶ್ಲೋಕ ೭೪ರ ಮುಂದಿನ ಗದ್ಯ—

ततस्तं वल्लोऽपि स्त्रैणसमुचितेन कंठस्वरेण मृदुलमेवं जगाद॥ ಅಂದರೆ: ಸ್ತ್ರೀಸಮುಚಿತವಾದ ಕಂಠಸ್ವರೇಣ (ಎಂತ ಅರ್ಥ.) ಇತ್ಯಾದಿ. ಈ ಗದ್ಯದಿಂದ ಹೇಳಿರುವರು, ಮತ್ತು ಭೀಮಸೇನನ ಶಾರೀರಕ ಸ್ತ್ರೀವೇಷವನ್ನು ಇದೇ ಆರನೇ ಸ್ತಬಕ ೭೨ನೇ ಶ್ಲೋಕದಲ್ಲಿ—

गीर्भिस्तस्तवाद्य चतुराभिरुदस्यतेमे
गंधर्वदंडन भयं त्वदवाप्तिविघ्नः ॥
तस्माद्व्रजस्व रतिसौख्य भरायरात्रौ ।
सौमे स्थिते तमसि नर्तनगेहमध्यं ॥

ಈ ಪ್ರಕಾರ ಹೇಳಿರುವರು. (ಈ ಶ್ಲೋಕವು ದ್ರೌಪದಿ ಭಾಷಣವಾಗಿರುವದು.) ಇಲ್ಲಿ ಸ್ತ್ರೀವೇಷದಿಂದ ರಹಿತನಾದ ಭೀಮಸೇನನು ಅಂಧಕಾರದಲ್ಲಿ ಇರುತಿರಲಿಕ್ಕಾಗಿ ಅಂತ ಎರಡನೇ ಅರ್ಥ ಹೇಳಿದರೆ ಕಾಮಾತುರನಾದ ಕೀಚಕನು ಭೀಮಸೇನನ ಶಯನ ಸಮೀಪವನ್ನು ಕುರಿತು ಮಾತನಾಡಿದನೆಂದು ಹೇಳಿದೆ. ಭೀಮನು ನಾರೀಸ ಪಥ್ಯದಿಂದ ರಹಿತನಾಗಿದ್ದರೆ ಕೀಚಕನು ಪುರುಷನೆಂದು ತಿಳಿದು, ಕೂಡಲೇ ಯುದ್ಧಕ್ಕೆ ಪ್ರಾರಂಭಿಸುತಿದ್ದನು. ಮುಂದೆ ವರ್ಣಿಸಿದ ಸಂಭಾಷಣವೇ ಇಲ್ಲದಂತಾಗುತಿತ್ತು. ಆದ್ದರಿಂದ ಚಂಪುಭಾರತ ಟಿಪ್ಪಣಿಕಾರನು ಈ ದೋಷವು ಬರಬಾರದೆಂದು ಭೀಮೋಸ್ಥಿತೆ ಅಂಬುವ ಪದಕ್ಕೆ

भीमे, भीमसेने, मद्भूमिकामापन्ने स्थिते सति ಎಂತ ಅರ್ಥ ಬರದಿರುವನು; **भूमिका** ಅಂದರೆ: ವೇಷವೆಂದು ಪ್ರಸಿದ್ಧವದೆ. ಇತ್ಯಾದಿ ಪ್ರಮಾಣಗಳಿಂದಲೂ ಸಹ ಭೀಮನು ಭಾಮಿನಿವೇಷವನ್ನು ಧರಿಸಿ, ದ್ರೌಪದಿಯೊಂದಿಗೆ ನರ್ತನಾಗಾರಕ್ಕೆ ದುಷ್ಟ ಕೀಚಕನ ಹನನ ಉದ್ದಿಶ್ಯ ತೆರಳಿದರೆಂದು ನಿರ್ಣಿತಾರ್ಥವು.

೩ನೇ ಶಂಕಾ.

ಭೀಮಸೇನನ ಎದೆಯಲ್ಲಿ ಮೊಲೆ ಇಲ್ಲದೆ ಕಠಿಣವಿದ್ದದ್ದನ್ನು ನೋಡಿ, ಕೀಚಕನು ಗದಗದ ನಡುಗುತ್ತ ಹಿಂದಕ್ಕೆ ಸರಿಯಲು, ಭೀಮನು ಕೀಚಕನ ತುರುಬನ್ನು ಹಿಡಿದಕೂಡಲೇ ಅಂಜಿಕೆಯಿಂದ ನಡುಗಿ ಅತಿ ದೈನ್ಯವೃತ್ತಿಯಿಂದ ಬಿಡು ನಾರಿ ಬಿಡು ನಾರಿ ಎಂದು ಉಪದೇಶಪರ ಮಾತುಗಳಿಂದ ವಿನಿತನಾಗಿ ಬೇಡಿಕೊಂಡಿದ್ದಾನೆ ಎಂದು ದಾಸಾರ್ಯರು ರಚಿಸಿರುವರು. ಇದು ಶ್ರೀ ಮಹಾಭಾರತ ತಾತ್ಪರ್ಯನಿರ್ಣಯ ಇತ್ಯಾದಿ ಗ್ರಂಥಗಳಿಗೆ ವಿರುದ್ಧವಾಗಿದ್ದು, ಭಾರತದಲ್ಲಿ ಕೀಚಕನು ಕೋಪಾವಿಷ್ಟನಾಗಿ ಭೀಮನೊಡನೆ ಅತಿಘೋರ ಯುದ್ಧವು ಮಾಡಿದನೆಂದು ಇರುವದು. ಅಲ್ಲದೇ ದುಷ್ಟ ಕೀಚಕನ ಸ್ವಭಾವಾನುಸಾರವಾಗಿ, ಅವನಲ್ಲಿ ದೈನ್ಯವೃತ್ತಿ ಮತ್ತು ನೀತಿಪರವಾದ ವಿನೀತ ವಚನಗಳು ತೋರಿಸಿದ್ದು ಅನುಗುಣ್ಯವಲ್ಲ.

೩ನೇ ಸಮಾಧಾನ.

ಈ ಶಂಕಾ, ಸಮಾಧಾನಕ್ಕೆ ಉತ್ತರವು ಯಾವ ಗ್ರಂಥದಲ್ಲಿಯೂ ವಿಶದವಾಗಿ ದೊರೆಯುಲಿಲ್ಲ. ಮತ್ತು ಆರಿಂದಲೂ

ಸಮಾಧಾನಪೂರ್ವಕವಾಗಿ ಉತ್ತರವೂ ಬರಲಿಲ್ಲ. ವಾಸ್ತವವಾಗಿ ಇದು ಬಹು ಕಠಿಣ ಪ್ರಮೇಯಯುಕ್ತ ರಹಸ್ಯವಿರುವದು. ಕೀಚಕನು ಮಹಾ ದೈತ್ಯನು. ಅವನಲ್ಲಿ ಯಾವ ತರದ ಸಜೀವಾವೇಶವೂ ಇದ್ದಿಲ್ಲ. ಇಂಥ ದುಷ್ಟನೂ, ಮತ್ತು ವಿರಾಟನ ರಾಜ್ಯದಲ್ಲಿ ಬಲಾಢ್ಯನೂ ಅಷ್ಟೈಶ್ವರ್ಯಮದದಿಂದ ಕಾಮಾಂಧನಾದವನಿಗೆ ಇಷ್ಟು ದೈನ್ಯವೃತ್ತಿ ಹುಟ್ಟುವ ಸಂಭವವೇ ಇಲ್ಲ. ದಾಸಾರ್ಯರು ರಚಿಸಿದ ಕಥೆಯು ಸಂಶಯಯುಕ್ತವಾಗಿ ತೋರುವದು ಕುಮಾರವ್ಯಾಸರಾದರೂ ಭೀಮಸೊಡನೆ ಕೀಚಕನು ಹೆಣಗಾಡಿದನೆಂದು ವರ್ಣಿಸಿರುವರು. ಇದರಿಂದ ಮತ್ತೂ ಸಂದೇಹಕ್ಕೆ ಕಾರಣ ಉಂಟಾಗುವದು. ಆದರೆ ಈ ವಿಷಯು ಕೆಲಮಟ್ಟಿಗೆ ವಿಮರ್ಶಿಸುವ.

ಭೀಮಸೇನ ದೇವರ ಬಲಕ್ಕೂ ಕೀಚಕನ ಬಲಕ್ಕೂ ಬಹು ಅಂತರವಿರುವದು. ಕೀಚಕನಾದರೂ ಮಹಾದೈತ್ಯ ಬಾಣಾಸುರನ ಸಮಾನನು ಅವನ ಬಲವಾದರೂ ಸಾಧಾರಣವಾಗಿದ್ದಿಲ್ಲ. ಆದರೂ, ಸಾಕ್ಷಾತ್ ಮರುದಂಶಯುಕ್ತರಾದ (ಭೀಮಸೇನ ದೇವರು) ಸಮಸ್ತ ಪ್ರಾಣಿಗಳಿಗೆ ಪ್ರಾಣದಾಯಕರಾಗಿ ಸರ್ವ ಪ್ರಾಣಿಗಳನ್ನು ಒಂದು ಕ್ಷಣವಾದರೂ ಎಡೆಬಡದೆ ಸಕಲ ಕ್ರಿಯಾಗಳನ್ನು ಮಾಡಿಸುವ ಸಾಮರ್ಥ್ಯಕ್ಕೂ ಕೀಚಕನ ಸಾಮರ್ಥ್ಯಕ್ಕೂ ಎತ್ತ!! ಗಜ, ಮಶಕನ್ಯಾಯದಂತೆ ಇರುವದು. ಸಾಕ್ಷಾತ್ ಇಂಥ ವಾಯು ಅಂಶಸಂಭೂತರಾದ ಭೀಮದೇವರು "ಕುಂತಿಯಿಂದ ಶ್ರೀ ಕೃಷ್ಣ

ನೆದುರಿಗೆ ನಿಮ್ಮ ಬಲವೆಷ್ಟೆಂದು ಕೇಳಿಸಿಕೊಳ್ಳಲು" ಶ್ರೀ ಭೀಮನು ಶ್ರೀ ಕೃಷ್ಣನ ದಯವಿರುವ ವರೆಗೆ ಈ ಬ್ರಹ್ಮಾಂಡವನ್ನು ಎರಡು ತಾಳದಂತೆ ಮಾಡಿ ಬಾರಿಸುವೆನೆಂದು ಹೇಳಿದರು. ಅದನ್ನು ಶ್ರೀ ಕೃಷ್ಣನು ಕೇಳಿ, ನಕ್ಕು, ಎಲೈ ಭೀಮನೇ ವಾಸ್ತವವಾಗಿ ನೀನು ನಿನ್ನಲ್ಲಿದ್ದ ಕಿಂಚಿತಂಶವನ್ನು ಪ್ರಕಟೀಕರಿಸಿದಿ ಎಂದು ಅಂದನು. ಇಂತು ಈ ಭೀಮಸೇನ ದೇವರ ಬಲ, ಸಾಮರ್ಥ್ಯ, ತೇಜಸ್ಸಿನ ಮುಂದೆ ಕೀಚಕನು ಯಾವ ಎಲೆ ಬಳ್ಳಿಯು ತೊಪ್ಪಲ.

ಆದರೆ ದುಷ್ಟ ದೈತ್ಯನಾದ ಕೀಚಕನ ಸ್ವಭಾವಾನುಸರಿಸಿ ಹೆಣಗಾಡುವ ಶಕ್ತಿಯಾದರೂ ಅವನ ಅಂತಃಪ್ರೇರಕರಾದ ವಾಯುದೇವರೆ ಅವನ ಸಾಧನ ಪೂರ್ತಿಗೋಸುಗ ಧೈರ್ಯ ಕೊಟ್ಟದ್ದು ನಿಜವು! ಆದರೂ ಬಲಿಷ್ಠ ಸಿಂಹನ ಕೈಯೊಳಗೆ, ನರಿಯು ಸಿಕ್ಕರೆ ಅದರ ಪಾಡು ಏನಾಗುವದೋ, ಅದೇ ರೀತಿ ಯಾಗಿಯೇ ಕೀಚಕನಿಗೆ ಅತಿ ಬಲಾಢ್ಯನಾದ ಭೀಮನ ಕೈ ಯಿಂದ ಪಾರುಗಾಣುವದಿಲ್ಲವೆಂದು ನಿಶ್ಚಯವಾಗಿಯೇ ತಿಳಿದು, ತನ್ನ ಜೀವದ ಮೇಲಿನ ಆಶೆಯಿಂದ ಅತಿ ದೈನ್ಯವೃತ್ತಿಯಿಂದ ವಿನೀತನಾಗಿ ಬೇಡಿಕೊಂಡನೆಂದು ಹೇಳಿರುವದು. ಕೆಲವು ಟ್ಟಿಗೆ ಸಮಂಜಸ ತೋರುವದು. ಇದಲ್ಲದೆ ಪ್ರತಿ ಪ್ರಾಣಿಗ ಳಿಗೆ ತನ್ನ ಜೀವಿತಾಶಾವು ಬಹು ಪ್ರೀಯವಾದದ್ದು. '**जीवं भद्राणि पश्यति**, ಎಂಬುವ ಸಾಮಾನ್ಯ ವಾಕ್ಯಾನುಸಾರ ವಾಗಿ ಕೀಚಕನು ತನ್ನ ಜೀವಿತಾಶಾ ಉಳಿಯದೆ ಇದ್ದದ್ದನ್ನು ನೋಡಿ, ಹೀಗೆ ವಿನಯಪರ ಮಾತುಗಳಾಡಿದನೆಂದು ಶ್ರೀಮ ತ್ಪೂಜ್ಯ ದಾಸಾರ್ಯರು ಉಪದೇಶಗಮ್ಯವಾದ ಕಥಾ ರಚಿಸಿ

ರುವರು. ಮತ್ತು ಶ್ರೀಮದ್ ಸ್ವಾದಿರಾಜರಾದರೂ ಕನ್ನಡ ಮಹಾಭಾರತ ತಾತ್ಪರ್ಯನಿರ್ಣಯದಲ್ಲಿ,

" ಕೀಚಕನು ಸೈರೇಂಧ್ರಿಯೇವೆ ಮಾತು ಕೊಟ್ಟದ್ದಕ್ಕೆ ಬಂದಳೆಂದು ತಿಳಿದು, ಪರಮ ಸಂತೋಷದಿಂದ ಆಲಿಂಗನಮಾಡಿ ಸ್ತನ ಸ್ಪರುಶವನ್ನು ಮಾಡ ಹೋಗೆ. ಅತಿ ಕಠಿಣವಾದಂಥಾ ಶರೀರವನ್ನು ಕಾಣೋಣಲ್ಲೇಥವಾದಂಥಾ ವಕ್ಷದೋಷಾದಿ ಎದಿಮೋಳಿನ ರೋಮಗಳು ನೋಡಿ, ಇದು ಹೆಂಗಲ್ಲ ಮೃತ್ಯುದೇವತೆಯೇ ಬಂತೆಂದು ಭಯದಿಂದ ಪಲಾಯನಕ್ಕೆ ಉದ್ಯೋಗವನ್ನು ಮಾಡಲಾಗಿ ಅವನ ತುರುಬು ಹಿಡಿದು ನಿಲ್ಲಿಸಿ, ಕಿಂಚಿತ್ಕಾಲ ಮುಷ್ಟಿಯುದ್ಧವನ್ನು ಮಾಡಿ ಕ್ಷಣಮಾತ್ರದಲ್ಲಿ ಕೀಚಕನನ್ನು ಸಂಹಾರಮಾಡಿದನು ಎಂದು ವಿವರಿಸಿರುವರು. ಈ ಮಹನೀಯರಾದರೂ ಅವನು ತನ್ನ ಜೀವಿತಾಶಾ ಉಳಿಯದೆ ಭಯದಿಂದ ಪಲಾಯನಕ್ಕೆ ಉದ್ಯೋಗವನ್ನು ಮಾಡಿದನೆಂದು ಸ್ಪಷ್ಟವಾಗಿ ಹೇಳಿರುವರು."

ಮತ್ತು ಸಾಮಾನ್ಯವಾಗಿ ಲೌಕಿಕದಲ್ಲಿ ಎಂಥ ಬಲಾಢ್ಯ ಕಾಮಾಂಧರಾದರೂ ದುಷ್ಟ ಕಾರ್ಯದಲ್ಲಿ ಉದ್ಯುಕ್ತರಾಗಿ ಪರದಾರಾಗ್ರಹದಲ್ಲಿ ಸಿಲ್ಕುತಿರಲು ಆ ಕಾಲದಲ್ಲಿ ಆ ದುಷ್ಟ ಕಾರ್ಯಕ್ಕೆ ವಿಘ್ನರೂಪವಾಗಿ, ಆ ಕಾಮಾಂಧರ ಮನಸ್ಸೆಂಬ ಸಮುದ್ರದಿಂದ ಎಷ್ಟೋ ತರತರದ ತರಂಗಗಳು ಹೊರಡುತ್ತಿರುವವು. ಆಗ್ಗೆ ಆ ಮದಾಂಧರ, ಧರ್ಮ, ವೀರ್ಯಶೌರ್ಯ, ಚಾತುರ್ಯವೆಲ್ಲವೂ ನಷ್ಟವಾಗುವ ಸಮಯವೇ ಇರುವದು.

ಇಂಥ ಸಮಯದಲ್ಲಿ ಆ ಪರನಾರಿ ನರನ ಕೈಗೆ ಈ ನೀಚ ಕಾಮುಕನು ಸಿಗಲು, ಅವನ ಗತಿ ಏನಾಗುವದೆಂಬುವದು ವಾಚಕರೇ ಊಹಿಸಬಹುದು!! ಆ ದುಷ್ಟ ಕಾರ್ಯದಲ್ಲಿ

ನಿವಿಯೋಗಿಸಿದವನ ಧೈರ್ಯವೆಲ್ಲವೂ ಕುಂದುವದಲ್ಲದೆ, ಎಂದೆಂದಿಗೂ ಧೈರ್ಯದೊಡನೆ ಯಶಸ್ಸನ್ನು ಹೊಂದಲಾರನು ಎಂತಯೇ.

ಪರಸ್ತ್ರೀ. ದಿವಾಭೋಗ ಇತ್ಯಾದಿ ದುಷ್ಟ ಕಾರ್ಯದಲ್ಲಿ ಕಾಮುಕನ ಮನಸ್ಸು ಸ್ಥಿರವಾಗಿ ಇರದೇ ಬಹು ಚಂಚಲವಾಗಿಯೇ ಇರುವದು. ಇದು ಕಾಮ, ಕೋಕಶಾಸ್ತ್ರಗಳಲ್ಲಿ ವಿಸ್ತಾರವಾಗಿ ಹೇಳಿರುವರಾದರೂ, ನಮ್ಮಂಥ ದುಷ್ಟ ಸ್ವಾಭಾವಿಕ ಪರನಾರಿ ಕಾಮುಕರಿಗೆ ಕಾಲಕಾಲಕ್ಕೆ ಪ್ರತ್ಯಕ್ಷವಾಗಿ ಅನುಭವಸಿದ್ಧವಾದದ್ದು. ಕಾರಣ ಪರಮಕರುಣಾಳುಗಳಾದ ದಾಸಾರ್ಯರು ಆ ದುಷ್ಟ ಕೀಚಕನು ಎಷ್ಟು ಬಲಿಷ್ಠನಾದರೂ ಅವನ ಆ ದುಷ್ಟಕಾರ್ಯಾನುಸಾರವಾಗಿ ಅವನ ಶೌರ್ಯವೆಲ್ಲವೂ ನಷ್ಟವಾಗಿಯೇ ಹೋಯಿತೆಂದಬಳಿಕ ಕನಿಷ್ಠರಾದ ನರಾಧಮರ ಪಾಡೇನು? ಅಂತೆಯೇ ಕಾಮುಕರ ಹೃದಯಭೇದನ ರೀತ್ಯಾ, ಭೀಮನ ಕೈಯೊಳಗೆ ಕೀಚಕನು ಸಿಕ್ಕಾಗ್ಗೆ ಅವನ ಧೈರ್ಯವೆಲ್ಲವೂ ಕುಂದಿ ತನ್ನ ಜೀವ ಉಳಿದರೆ ಸಾಕೆಂದು ಅತಿ ಧೈನ್ಯವೃತ್ತಿಯಿಂದ ಬೇಡಿಕೊಂಡನೆಂದು ಉಪದೇಶ ಮಾಡಿರುವರಲ್ಲದೆ ನಿರ್ಣಯಾಚಾರ್ಯರ ಉಕ್ತಿಗೆ ಯಾವ ತರದ ಬಾಧಕವೂ ಬರುವದಿಲ್ಲ.

೪ನೇ ಶಂಕಾ.

ಶ್ರೀ ಭೀಮನು ಕೀಚಕನನ್ನು ಸಂಹರಿಸಿದ ಮೇಲೆ ಬಹು ಸಿಟ್ಟಿನಿಂದ ಅವನ ಶಿರಸ್ಸು ಹೃದಯದಲ್ಲಿಯೂ ಮತ್ತು ಕೈಕಾಲುಗಳನ್ನು ಕಿತ್ತಿ ಅವನ ಪೃಷ್ಠದಲ್ಲಿ ಸೇರಿಸಿ, ಪಿಂಡಿಕೃತವಾಗಿ

ಮಾಡಿಬಿಟ್ಟರೆಂದು. ಭಾರತ ಮತ್ತು ತಾತ್ಪರ್ಯನಿರ್ಣಯ ಇತ್ಯಾದಿ ಗ್ರಂಥಗಳಲ್ಲಿ ಹೇಳಿರುವರು. ಆದರೆ ದಾಸಾರ್ಯರು ಹೀಗೆ ಹೇಳದೆ ಭೀಮನು ಕೀಚಕನನ್ನು ಸಂಹರಿಸಿ, ಅವನ ಕುಣಪವನ್ನು ದೃಷ್ಟಿಗೊಂಬೆಯಂತೆ ಇಟ್ಟು ತನ್ನ ಠಾವಿಗೆ ಹೋದನೆಂದು ಹೇಳಿರುವರು. ಇದು ವ್ಯತ್ಯಾಸ ತೋರುವದು.

೪. ಸಮಾಧಾನ.

ಭಾರತ ಮತ್ತು ಇತರ ಗ್ರಂಥಗಳಿಗೂ, ದಾಸಾರ್ಯರು, ರಚಿಸಿದ ಕಥೆಯ ಮಥಿತಾರ್ಥಕ್ಕೆ ಯಾವ ತರದ ವ್ಯತ್ಯಾಸವು ಬರುವದಿಲ್ಲ. ಕಾರಣವೇನೆಂದರೆ ಭೀಮಸೇನನು ಕೀಚಕನನ್ನು ಸಂಹರಿಸಿದ್ದು ನಿಜ; ಮತ್ತು ಕೀಚಕನು ದ್ರೌಪದಿ ದೇವಿಯರನ್ನು ಕುರಿತು, ಯಾವ ಬಗೆಯಿಂದ ಅಕೃತ್ಯ ಸಾಂಕೇತಗಳನ್ನು ಮಾಡಿದನೋ! (ಅವೆಲ್ಲವನ್ನು ಭೀಮನು ತಾನು ಸರ್ವಜ್ಞನಾದರೂ ದ್ರೌಪದಿ ದೇವಿಯರಿಂದ ತಿಳಿದು) ಕೀಚಕನನ್ನು ಸಂಹರಿಸಿದ ಮೇಲೆಯೂ ಅತಿ ಕೋಪಾವಿಷ್ಟನಾಗಿ ಅವನ ಕೈಕಾಲುಗಳನ್ನು ಪೃಷ್ಠದಲ್ಲಿ ಸೇರಿಸಿದರೆಂದು ಭಾರತಾದಿ ಅನೇಕ ಗ್ರಂಥಗಳಲ್ಲಿ ಹೇಳಿರುವರು. ಆದರೆ ಇಲ್ಲಿ ದಾಸಾರ್ಯರು, ಪರಸ್ತ್ರೀರತರಾದ ದುಷ್ಟಜನರುಗಳು ಕೀಚಕನಿಗೆ ಆದ ಕೆಟ್ಟ ಪರಿಣಾಮವನ್ನಾದರೂ ನೋಡಿ, ದುಷ್ಟಕಾರ್ಯವನ್ನು ಬಿಡಲೆಂದು ಭಾವಿಸಿ, ಆ ದುಷ್ಟನ ಕೆಟ್ಟ ಕುಣಪವನ್ನು ದೃಷ್ಟಿಗೊಂಬೆಯಂತೆ ಇಟ್ಟದ್ದನ್ನು ನೋಡಿ, ಜನರು ಭಯಕೆಳ್ಳಗಾಗಿ ಕೆಟ್ಟಕೆಲಸವನ್ನು ಸರ್ವಥಾ ತಮ ಮನ

ಸ್ಸಿನಿಂದ ಸಹ ಬಿಟ್ಟುಬಿಡಲಿ ಎಂದು ಹೇಳಿರುವರಲ್ಲದೇ ಯಾವ ಸಂದೇಹಕ್ಕೊಳಪಡುವಂತಿಲ್ಲ.

ಈ ಮುಖ್ಯ ಶಂಕೆಗಳಲ್ಲದೆ ಇನ್ನು ಕೆಲವು ಸಾಮಾನ್ಯ ಶಂಕೆಗಳು ಇರುವವು.

೧. ಕೀಚಕನಿಗೂ ದ್ರೌಪದಿ ದೇವಿಯರಿಗೂ ಆದ ಸಂವಾದ ಕಥೆಯು ಸ್ವಲ್ಪ ಹಿಂಚುಮುಂಚಾಗಿ ಕಿಂಚಿತ ಮಾತುಗಳು ಭಿನ್ನವಾಗಿರುವವು.

೨. ಸೈರೇಂಧ್ರಿಯು ಕೀಚಕನಿಂದ ತಾಡಿತಳಾಗಿ ಬಂದು, ಅರಸಿನ ಸಭೆಯಲ್ಲಿ ಆಲ್ಪರಿದ ಕೆಲವು ಮಾತುಗಳು ಇದರಲ್ಲಿ ಹೆಚ್ಚಾಗಿದ್ದು ಹೃದಯದ್ರಾವಕವಾಗಿರುವವು.

೩. ಕಂಕಾಚಾರ್ಯನಾದ(ಧರ್ಮರಾಯನು) ದ್ರೌಪದಿಗೆ ಉಪದೇಶಮಾಡಿದ್ದು (ಹರಿ ಕೊಟ್ಟದ್ದುಂಡು ಇಟ್ಟಂತೀಹರಲ್ಲದೆ ಮರಳೊಂದು ಬಯಸೂವರೆ) ಇದು ಭಾರತದಲ್ಲಿ ವಿಸ್ತಾರವಾಗಿಲ್ಲ.

೪. ದ್ರೌಪದಿ ದೇವಿಯರು, ಶ್ರೀ ಕೃಷ್ಣನನ್ನು ಆ ಕಷ್ಟ ಕಾಲದಲ್ಲಿಯೇ ಸ್ತೋತ್ರಮಾಡಿದಳೆಂದು, ನರಲೀಲೆಯನ್ನು ತೋರಿದಂತೆ ತೋರಿಸಿರುವರು. ಆದರೆ ದ್ರೌಪದಿ ದೇವಿಯರು ಅಚ್ಛಿನ್ನಭಕ್ತರು. ಸದಾಭಗವದ್ಧ್ಯಾನರತರು. ಪ್ರಲ್ಹಾದ ಧೃವರಾಯ ಗಜರಾಜನಂತೆ ಕಷ್ಟಕಾಲದಲ್ಲಿ ಸ್ಮರಣೆಮಾಡಿದವರಲ್ಲ. ಆದರೆ ಅಜ್ಞಾತವಾಸಕ್ಕಾನುಸರಿಸಿಯೇ ತಮ್ಮ ನಿಜ ರೂಪವನ್ನು ಬೈಲಿಗೆ ತೋರದೆ ಈ ಪ್ರಕಾರ ಆರಿಗೆ ಮೊರೆ ಇಡಲೀಗ ಹರೀ ಎಂದು ಸ್ತೋತ್ರಮಾಡಿರುವರು.

೫. ಮತ್ತು ಭೀಮನಾದರು ಧರ್ಮರಾಜನ ಅಜ್ಞಾತ ವಾಸ ಪ್ರತಿಜ್ಞೆಕ್ಕೆ ಭಂಗಬಂದೀತೆಂದೂ, ಮತ್ತು ಕೀಚಕನ ಸಾಧನವು ಪೂರ್ತಿ ಆಗಲೆಂದು ವಿರಾಟರಾಜನ ಸಭೆಯಲ್ಲಿ ಧರ್ಮರಾಜನ ಸೊನ್ನೆಯಿಂದ ಅಸಮರ್ಥನಂತೆ ಸುಮ್ಮನಾದನು.

೬. ಭೀಮಸೇನ ದೇವರಿಗೂ, ದ್ರೌಪದಿ ದೇವಿಯರಿಗೂ ರಾತ್ರಿಕಾಲದಲ್ಲಿ ಮಹಾನಸ (ಅಡಿಗೆ ಮನೆಯಲ್ಲಿ) ಸಂವಾದ ಮಾತುಗಳು ದಾಸಾರ್ಯರು ಕೆಲವು ವಿಸ್ತಾರ, ಕೆಲವು ಸಂಕ್ಷಿಪ್ತ ರೀತ್ಯಾ ವರ್ಣಿಸಿರುವರು.

೭. ನರ್ತನಾಗಾರದಲ್ಲಿ ಶ್ರೀ ಭೀಮನಿಗೂ ಕೀಚಕನಿಗೂ ಆದ ಸಂವಾದದಲ್ಲಿಯೂ ಬಹು ರಸಭರಿತವಾಗಿ ವರ್ಣಿಸಿರುವರು; ಇತ್ಯಾದಿ ಅನೇಕ ಚಮತ್ಕಾರಮಾತುಗಳಿದ್ದರೂ, ಇವೆಲ್ಲವೂ ಯಾವ ತರದ ಸಂದೇಹಕ್ಕೆ ಆಸ್ಪದ ತೋರದೆ, ನಿರ್ಣೀತಾರ್ಥಕ್ಕೆ ಬಾಧಕವೇನು ಬರುವಂತಿಲ್ಲ.

ಮತ್ತು ಇವೆಲ್ಲವುಗಳನ್ನು ವಿಸ್ತಾರವಾಗಿ ವಿಮರ್ಶಿಸಲು, ಅವಕಾಶವಾದರೂ ಇಲ್ಲ; ಕಾರಣ ಮುಖ್ಯ ಮುಖ್ಯ ಸಂಶಯಗಳ ಮೇಲೆ ಶ್ರೀಶನ ಆಜ್ಞೆಯಂತೆ ವಿಮರ್ಶಿಸಿ, ಇಷ್ಟೇ ಸಮಾಧಾನಗಳಲ್ಲದೇ, ಮುಂದೆ ಶ್ರೇಷ್ಠರಾದ ಜನರುಗಳು, ಇನ್ನೂ ವಿಶಿಷ್ಟವಾಗಿ ತಿಳಿಸಿಕೊಡಲೆಂದು ಪ್ರಾರ್ಥಿಸುವ.

ಮತ್ತೂ (ದಾಂಭಿಕನಾಗಿ) ಬಾಹ್ಯದಲ್ಲಿ ಮಾತ್ರ ಕರ್ಮ ವಿಶಿಷ್ಟನಂತೆ ತೋರ್ವ ಈ ದುಷ್ಟಾಚಾರನಿಗೆ, ಅಷ್ಟಮುಖ ಮನಸಗತ ಇಷ್ಟವಾದ ಸುವಾಸನೆಯನ್ನು ಶ್ರೀ ಪ್ರೇಷ್ಠನಿಗೆ ಅರ್ಪಿ

ಸುವ ಸ್ಪಷ್ಟವಾದ ಬುದ್ಧಿಯು ಪ್ರೇರಿಸಿದಂತೆಯೇ ಶ್ರೀ ಕೃಷ್ಣನಿಗೆ ಕೃಷ್ಣಾರ್ಪಣಪೂರ್ವಕವಾಗಿ ಅರ್ಪಿಸಿರಲು, ಕೃಪಾಳು ಆದ ಆ ಜಗಚೇಷ್ಟನು ಸ್ವೀಕರಿಸಿ, ಮುಂದೆ ಈ ದುಷ್ಟನ ಕೆಟ್ಟ ಆಚಾರವನ್ನು ಹೋಗಲಾಡಿಸಿ, ಶ್ರೇಷ್ಠವಾದ ಶಿಷ್ಟಾಚಾರದಲ್ಲಿ ನಿರತರಾದ (ಜ್ಞಾನಿಗಳ) ಆಪ್ತೇಷ್ಟವರ್ಗಕ್ಕೆ ಈ ಕನಿಷ್ಠನನ್ನು ಬಾಗಿಸಲೆಂದು, ಮನಮುಟ್ಟಿ ನಮಿಸುವ,

ಸಜ್ಜನ ಹಿತೈಷಿ,

ಪ್ರಕಾಶಕ:

ಹನಮಂತರಾವ ವೆಂಕಟರಾವ,
ಕು|| ಗೊರಾಬಾಳ,
ವಕೀಲ, ಲಿಂಗಸೂಗೂರ,
ಜಿ. ರಾಯಚೂರ, ನಿಜಾಂ.

ಶಕೆ ೧೮೪೮ ಫಾಲ್ಗುಣ
ಶು|| ೧೧,
ಲಿಂಗಸೂಗೂರ.

हरिः

॥ श्री सीतांरामायमंगलं ॥

॥ श्री कुप्पीभीमप्रसीद ॥

॥ श्री गुरुराघवेंद्र श्री गुरुवरदेंद्रो विजयते ॥

ಶ್ರೀ ಪ್ರಾಣೇಶ ವಿಠ್ಠಲ

ವಿರಚಿತ

ಭೀಮಸೇನ ವಿಲಾಸ.

(ಕೀಚಕವಧ ಕಥಾ)

ಶ್ರೀ ಗುರು ಮಧ್ವಾಂತರ್ಗತ ಶ್ರೀ ವೇದವ್ಯಾಸಾಯ ನಮಃ

॥ ವಾರ್ಧಿಕಷಟ್ಪದಿ ॥

ಶಿರಿವಿಧಿ ಭವೇಂದ್ರಾರ್ಕ ಇಂದು ವಂದಿತ ಚರಣ । ದರ
ರಪಿಗದಾಬ್ಜಾಂಕ ಶುಭಕೌಂಸ್ತುಭಾಭರಣ ! ಹರಿಶಯನ
ದ್ವಿಜಗಮನ ಶಶಿವದನ ಖಳದಮನ ಪ್ರಾರ್ಥಿಸುವೆ ಭೈಷ್ಮಿ
ರಮಣಾ ॥ ಸುರಗಂಗೆಯನು ಪಡದ ಶುಭಪಾದ ಬಹುಮೋದ ।

ವಿರಚಿಸುವೆ ಭೀಮಸೇನ ವಿಲಾಸ ನಿರ್ದೋಷ । ಪರಿಹರಿಸು
ವಿಘ್ನತೆಯು ಪಾಲಿಪುದು ಸನ್ಮತಿಯು ಮೆರಿಸು ಧರಿಯೊಳಗೆ
ಕೃತಿಯಾ ॥ ೧ ॥

। ಭಾಮಿನಿಷಟ್ಪದಿ ।

ವಿಪಿನ ವಾಸವ ಕಳದು ಇರುತಿರೆ । ಗುಪಿತದಲಿ ಪಾಂಡ
ವರು ಮತ್ಸ್ಯ । ಧಿಪನ ಪುರದೊಳಗೊಂದು ದಿನದಲಿ ಪಾಪಿ
ಕೀಚಕನೂ ॥ ದ್ರುಪದತನುಜೆಯು ಚಲ್ವಿಕೆಯುಕಂ । ಡಪರಿ
ಮಿತ ಕಾಮಾತುರದಿ ಆ । ನೃಪಸರಸಿಗಾಲ್ಪರಿಯುಲವನಿಗೆ
ಬೋಧಿಸುವಳೆಂತೂ ॥ ೧ ॥ ಅನುಜ ಕೇಳವಳೆಲ್ಲರಂತ । ಲ್ಲೆನಗೆ
ಸೇವಕಳಾದರೆಯು ಸರಿ । ಮನದೊಳಗೆ ನಾನಂಜಿ ನಡೆವೆನು
ತಪ್ಪು ನುಡಿದೆಲವೋ ॥ ಮನುಜಳಲ್ಲೈವರು ಪತಿಗಳಂ । ಗನಿಗೆ
ದೇವತೆಗಳಿವರು ದುರಾ । ತ್ಮನೆ ಬಯಸಿದೆಲೊ ಸಾವು ಇಲ್ಲಿರ
ಸಲ್ಲ ಪೋಗೆನಲೂ ॥ ೨ ॥ ಮರುದಿವಸ ಬಂದಕ್ಕ ಹ್ಯಾಗಾ ।
ದರೆಯು ಬದುಕುವದಿಲ್ಲ ಈತಿಯು । ನರದೆ ಸಾವೆನು ಕೂಡಿ
ನಂದಂಘ್ರಿಗಳಗೆರಗಲ್ಕೆ ॥ ಮರುಳೆ ಕೆಟ್ಟೆಲೊ ನಾಳೆ ನಿನ
ಮಂ । ದಿರಕೆ ಕಳಸುವೆ ಪೋಗೆನುತಲಿ । ತ್ವರದಿ ಅನುಜಾಲ
ಯದಿ ಮಧು ತಾ, ಎನೆ ನುಡಿವಳೆಂತೂ ॥ ೩ ॥

ಅಂತೂ ಪದ ॥ ೪ ॥

। ಪದ, ರಾಗ–ಕಾಂಬೋಧಿ, ಆದಿತಾಳ ॥

ಬ್ಯಾಡವ್ವಾ (ಬೇಡವ್ವಾ) ಬ್ಯಾಡವ್ವಾ । ನಾಡೊಳಗಿನ
ಗಂಡರು ಬಹು ಜಂಡರು ॥ ಬ್ಯಾಡವ್ವಾ ಬ್ಯಾಡವ್ವಾ ॥ ಪಲ್ಲ ॥
ಕಷ್ಟವೆಮಗೆ ಬಂದುದಕೆ ಲಜ್ಜೆಯು । ಬಿಟ್ಟೆರಡು ದಿನ ಇದ್ದದಕೀ

ಗಲೆ ॥ ದುಷ್ಟನ ಮನಿಗೆ ಹೋಗೆಂದೀಪರಿ । ಥಟ್ಟನೆ ನಿರ್ಭಿಡಿಯದಲಾಡುವದೂ ॥ ೧ ॥ ಯಾಕೆಂದರೆ ಬಹು ದಿವಸಾ । ಎನ್ನನು । ಸಾಕಿದಿ ಈಗಿವನ್ಹಿಂ ಸಾವಾಗಲು ॥ ನೀ ಕಣ್ಣೀರಿಲಿ ಕ್ಲೇಶಾಮಾಡಲು । ನಾ ಕಾಣಲು ಬಹು ದೋಷಾವಲ್ಲವೇ ॥ ೨॥ ದ್ವೇಷಿ ಇವನು ಪ್ರಾಣೇಶ ವಿಠ್ಠಲಗೆ । ದಾಸಳು ಎನ್ನನು ಕ್ಲೇಶಾಬಡಿಸದೆ॥ ತಾ ಸಲಹುವ ಲಕ್ಷ್ಮೀಶಾ । ನಿಮ ತ । ಮ್ಮಾ ಸಾಗುವ ಸುಖಲೇಶಾವಿಲ್ಲವೆ ॥ ೩ ॥ ॥ ೭ ॥

॥ ಆರ್ಯವೃತ್ತ ॥

ಎನೆ ದ್ರೌಪದಿ ಗರಸಿನ ಸತಿ ಕೋಪದಿ । ಎನ ಸೇವಕಳಾಗಿರಲಿಕ್ಕೇ॥ ಅನುಕೂಲಕೆ ಬಾರೆಲೆ ಶೀಕ್ಷಿಸುವೆನು । ಮನಸು ಗೊಟ್ಟು ಪೋಗೆನಲಿಕ್ಕೇ ॥ ೧ ॥ ಕಣ್ಣೀರುದುರುತ ಮಧು ತರಲೋಸುಗ । ಸ್ವರ್ಣದ ಬಟ್ಟಲು ಕೈಕೊಂಡೂ ॥ ಪನ್ನಂಗಶಯನನ ಸ್ಮರಿಸುತ ಬರುತಿಹ । ಹೆಣ್ಣುಮಗಳ ನಾ ಖಳಕಂಡೂ ॥ ೨ ॥ ನಾಚಿಕೆ ಬಿಟ್ಟೇಕಾಂತಕ ಬಾಯಂ । ದಾಚಾರ್ವಕ ಕರಿಯಲು ಬಹಳೂ ॥ ಆ ಚಲ್ವೆಂಜದೆ, ಪ್ರತಿ ಪ್ರತಿ ಮಾತಿಗೆ । ಕೀಚಕನೊಡ ನಿಂತಾಡುವಳೂ ॥ ೩ ॥ ॥ ೧೦ ॥

॥ ಪದ, ರಾಗ–ಶಂಕರಾಭರಣ, ಆದಿತಾಳ ॥

ಬಾ ಬಾ ಮಂದಗಮನೆ । ಬಾ ಬಾ ಇಂದುವದನೆ ॥ ಬಾ ಬಾ ಕುಂಡಲಿವೇಣಿ । ಬಾ ಬಂಧ್ಯ ಜಾಣೇ ॥ ೧ ॥ ನಿನ್ನಲ್ಲಿ ಮಧುವಿಗೇ ಚನ್ನೆ ಕಳುಸಿಹಾಳು ॥ ಸಣ್ಣ ಮಾತ್ಯಾಕೆಲೊ । ಯನ್ನೋಳು ಖೋಡಿ ॥ ೨ ॥ ತೊತ್ತೇರೊಳಗ ನಿನ್ನ । ಷ್ಟ ತ್ತೂ ಮರಿಲ್ಲವೆ॥ ಗರ್ತೆರಂದಾದಿಸಿನ್ನಾ । ಉತ್ತೂರೆ ಜಾಣೇ ॥ ೩ ॥

ಗಂಡಿಲ್ಲದವಳೆಂದು । ದಿಂಡೇತನದಲಂದಿ ॥ ಖಂಡಿಸುವರೊ ನಿನ್ನ । ಕಂಡಾರೆ ಖೋಡಿ ॥ ೪ ॥ ನಿನ ಗಂಡ ಕಂಡಾರೆ । ಎನ ದಂಡಿಸುವನಂದಿ ॥ ಅನುಮಾನ ಬಿಡಿಸೀದೆ । ಘನ ಜಾರಜಾಣೇ ॥ ೫ ॥ ಎಲೆ ಪಾಪಿ ಏನಂದ್ಯೊ । ಬಲು ಗಾರತಿಗೆ ಬಾಯಿ ॥ ಹುಳಿವ್ಹೋದು ಛೀ ಛೀ । ಕಾಲಗೇಡಿ ಖೋಡಿ ॥ ೬ ॥ ಬೈದಾರೆ ಮತ್ತಿಷ್ಟು । ಮೋದಾ ತೋರೊದು ಸ್ವಲ್ಪ ॥ ಖೇದಾಬಾರದು ಹೀಗ್ಯಾ । ಕಾದೀತು ಜಾಣೆ ॥ ೭ ॥ ಸಲಿಗೇ ಮಾತುಗಳೀಗೆ । ನ್ಹೊಳಗ್ಯಾಕೆಲವ್ಹೋ ಪರಾ ॥ ಲಲನೆಗಂಬದು ನಿನ । ಗೊಳತಲ್ಲೊ ಖೋಡಿ ॥ ೮ ॥ ಪರಸತೀ ಎನಬ್ಯಾಡ । ಅರಸೀ ಎನಗಾಗಿರು ॥ ಜರಿವೇನು ಪಟ್ಟದ ತರುಣೀಯು ಜಾಣೇ ॥ ೯ ॥ ಮರಣಾವಾಗ್ವದು (ವಾಗುವಿ) ನಿನ್ನ । ತರುಣೀ ಬಿಡುವದೆ ಸತ್ಯ ॥ ಸುರರು ತಥಾಸ್ತೆಂಬುವರು ಕೇಳು ಖೋಡಿ ॥ ೧೦ ॥ ತರಳೂವರೆಲ್ಲಾರು । ಇರಲಿಕ್ಕೆ ಬಂದಿಲ್ಲಾ ॥ ಧರಿಯೊಳು ದಯಮಾಡಿ । ಬೆರವ್ಹೋದೆ ಜಾಣೇ ॥ ೧೧ ॥ ಪರನಾರಿ ಬಯಸಿದ । ನರು ಬದುಕೆಟ್ಟರು ॥ ಸ್ಮರಿಸೀಕೊ ನಿನಗದು । ಅರಿಕಿಲ್ಲೋ ಖೋಡಿ ॥ ೧೨ ॥ ಚಂದಿರದೇವ ಪು । ರಂದಾರ ಪ್ರಮುಖರು ॥ ಛಂದಾಗಿ ತೋರ್ವರೊ ॥ ಮಂದೀಗೆ ಜಾಣೇ ॥ ೧೩ ॥ ಹೆಜ್ಜೆ ತಿಳಿಯದವ । ಲಜ್ಜೆಗಟ್ಟವ ಒಣ ॥ ಘರ್ಜಿಸುತೀಹ ನೀವಂ । ದುರ್ಜನ ಖೋಟೀ ॥ ೧೪ ॥ ಮಾನಿಸೀ ನಿನ್ನಲ್ಲಿ । ಧ್ಯಾನಾವಿಟ್ಟದ್ದು ಬಲ್ಲ ॥ ಪ್ರಾಣೇಶ ವಿಠ್ಠಲಾ । ತಾನೇವೆ ಜಾಣೇ ॥ ೧೫ ॥

ಅಂತೂ ಪದ ॥ ೨೫ ॥

॥ ಆರ್ಯವೃತ್ತ ॥

ಅಂದನೂತಿಗರವಿಂದ ವದನೆ ಕಡು । ನೊಂದು ಪಾಪಿ ಏನೆಂದೆನುತಾ ॥ ತಂದ ಬಟ್ಟಲೀಡ್ಯಾಡಿ ಪೋಗುತಿರೆ । ಮುಂದೆ ಕೇಳು ಕುರುಕುಲಜಾತಾ ॥ ೧ ॥ ದ್ವಿನವ ಕಳೆಯು ಕಾಯುವ ನೋಡೆಸುರನು । ಮನುಮಥ ಬಾಧಿಯು ತಾಳದಲೇ ॥ ವನಿತೆಯು ಬೆನ್ನತ್ತ್ಯೋಗಿ ಕರವ ನಿ । ಲ್ಕೆನುತ ಪಿಡಿವುತಿರೆ ಅಂಜದಲೇ ॥ ೨ ॥ ಕೈ ಬಾಯಿಗೆ ಹಚ್ಚ್ಯೊಡಲು ಖತಿಯಿಂ । ದಾಭರದಲೆ ಕಾಲಿಲೆ ಒದ್ದೂ ॥ ವೈಭವದಲಿ ಅಂತಃಪುರದಲ್ಲಿಗೆ । ವೈಬೇಕೆನೆ ನೋಡಾ ದದ್ದೂ ॥ ೩ ॥ ರವಿಭೃತ್ಯನು ಬಂದಸುರನ ಶೀಕ್ಷಿಸಿ । ಯುವತಿಯ ಬಿಡಸಿ ಪೋಗಲುಕ್ಕೈಡದೂ ॥ ಅವನಿಯಲ್ಲಿ ಮುಡಿ ಹೊರಳುತ ಬಹು ರ । ಕ್ತವು ಸುರಿಸುತ ಗಲ್ಲವುವಡದೂ ॥ ೪ ॥ ದಾನವನೀಗಲೆ ಶೀಕ್ಷಿಸಲ್ಯಾತಕೆ । ಪ್ರಾಣೇಶ ವಿಠಲನ ಇಚ್ಛೆನುತಾ ॥ ಮಾನಿನಿ ಸಭಿಯಲಿ ಅಳುತಿಹಳೀಪರಿ । ಮಾನವಪತಿ ಕೇಳಾ ಮಾತಾ ॥ ೫ ॥ ಅಂತೂ ಪದ ॥ ೩೦ ॥

॥ ಪದ, ರಾಗ–ನೀಲಾಂಬರಿ, ತಾಳ ಅಟ್ಟ ॥

ದಿಕ್ಕಿಲ್ಲಾ ಧೋಯಿತೆ ಈ ಸಭೆಯಲ್ಲೀ । ರಕ್ಕಾಸಂಗನೆಯನ್ನು ಕೊಲ್ಲುವದೆಲ್ಲೀ ॥ ಪಲ್ಲ ॥ ಮತಿವಂತೀ ನೃಪನರಸೆಂದೂ ತಿಳಿದಿನೇ । ಇತರ ಚಿಂತಿಗಳಿಲ್ಲವೆಂದು ಸೇರಿದಿನೇ ॥ ಪತಿಗಳೈವರು ಇದ್ದ ರಿಲ್ಲದಂತಾಯಿತು । ಕ್ಷಿತಿಯೊಳಗ್ಯನ್ನಾಳಿದಿಹರೆ ಅಧಮರೂ ॥ ೧ ॥ ನೆತ್ತರಾಸುರಿವದು ಗಲ್ಲವು ಸೀಳಿ । ಎತ್ತ ಹೋದಿರಿ ನನ್ನ ಧೊರೆಗಳೆ ಕೇಳೀ ॥ ಹತ್ತರದಲಿ ಬಿದ್ದ ಸರ್ಪನ ಕೊಲ್ಲಾರು । ಅತ್ತತ್ತವಾಯಿತೆ ಈ ಜನ್ಮ ಹರಿ ಹರೀ ॥ ೨ ॥ ಬಂಜೇರೆ ಹೆಣ್ಣು

ಹಡದವರ ಇಲ್ಲೇ । ಕಂಜಾವದನೆ ಏನಾಪತ್ಯಾನರಲ್ಲೇ ॥ ಎಂಜಲಗಳ್ಯಾಕಾಲಿಲಿ ಒದ್ದಾನೆಂದೂ ಧ । ನಂಜಯಸಖಗಿಲ್ಲಾ ಧೋಯಿತೆ ಅಭಿಮಾನಾ ॥ ೩ ॥ ಮೂವರಿಂದಲಿ ಅಯ್ಯೊ ಭಂಗವ ಬಟ್ಟೇ । ಆ ವಿಧಿಬರದಾನೆ ಪಣೆಯಲ್ಲಿ ಇಷ್ಟೇ ॥ ಕಾವದಾಗದೆ ಬಳಲುವರನೊಬ್ಬರ ಕಾಣೇ । ಕೇವಾಲಾ ಜಡವೆ ಇಲ್ಲಿದ್ದ ಪುರುಷರೆಲ್ಲಾ ॥ ೪ ॥ ಒರಲೂವೆ ಕಂಕಾಚಾರ್ಯ್ಯರಿಗೆ ಕೇಳಿಸದೇ । ಕರುಣಾವುಟ್ಟದೆ ಕಣ್ಣಿಗನ್ಯಾ ಕಾಣಿಸದೇ ॥ ಧರವ ಧರ್ಮಜ್ಞರಿದು ಏನು ಮರದೀರಿ । ಶಿರಿಪತಿ ಪ್ರಾಣೇಶ ವಿಠಲ ಮೆಚ್ಚಾವನೇ ॥ ೫ ॥ ಅಂತೂ ಪದ ॥ ೩೫ ॥

॥ ಆರ್ಯವೃತ್ತ ॥

ಎಂತೆನ್ನಲಿ ಧರ್ಮಜನ ಸತ್ಯಸ್ವಪ । ಇಂತಾಡಲು ಮನ ಕರಗದಲೇ ॥ ನಿಂತವರಿಗೆ ಸತಿಯುಂ ತಿಳಸದಲೇ । ಅಂತಿಹ ನೀ ಪರಿ ಕೇಳಗಲೇ ॥ ೧ ॥ ॥ ೩೬ ॥

॥ ಪದ, ರಾಗ–ಪಾರಿವಿ, ಅಟ್ಟತಾಳ ॥

ಜರಿಕೊಟ್ಟದ್ದುಂಡು ಇಟ್ಟಂತಿಹದಲ್ಲಾದೇ । ಮರುಳೊಂದು ಬಯಸುವರೇ ॥ ಮರುಳು ಹೆಂಗಸರಂತೆ ಒರಲೂವೆ ಸೈರಂಧ್ರಿ । ಧರವೇನೆ ನಿನಗೀಮತೀ । ಸು ಪತಿವ್ರತೀ ॥ ಪಲ್ಲಾ ॥ ಚಂದ್ರಹಾಸನ ಹರಿ । ಶ್ಚಂದ್ರರಾಯನ ನೋಡು । ಅಂದು ನಳನ ಪತ್ನಿಯಾ ॥ ಇಂದುವದನೆ ತಾರಾದೇವಿಯ ಕುಂತಿಯಾ । ನಂದನರನ ನೀ ನೋಡೆ ಮಾತಾಡೇ ॥ ೧ ॥ ಶರಿರಾಭಿಮಾನವ ತೊರೆಯದನಕ ಈ । ಕರಕರೆಂದಿಗೂ ತಪ್ಪದೂ ॥ ಅರಸಿನ ಮುಂದೆ ಈ ಪರಿ ಅಬ್ಬರಿಸುವದು । ಹರದೇರ ಮತವು ಏನೇ ।

ಏ ಜಾಣೇ ॥ ೨ ॥ ಪತಿಗಳೈವರು ನಿನಗತುಳ ದೇವತೆಗಳು । ಅತಿ ವೇಗದಲಿ ಕಾಯುರೇ॥ ಕೃತಿಪತಿ ಪ್ರಾಣೇಶ ವಿಠಲಗೆ ಇದು ಸನು । ಮತವೆಂದು ತಿಳದಿಹರೇ । ಏ ನೀರೇ ॥ ೩ ॥ ॥ ೩೯ ॥

॥ ಆರ್ಯವೃತ್ತ ॥

ಪೊಡವಿಪ ಹೀಗಂತಿರೆ ಮುಡಿ ಸಡಲಿದ । ಹುಡಿಯೊಳು ಹೊರಳುವ ಸತಿ ನೋಡೀ ॥ ಹೊಡೆಯಲೆ ಕೀಚಕ ನೀಕ್ಷಣೆಂದು ಪ । ಲ್ಗಡಿಯುತ ಮಾರುತಿ ಖತಿಮಾಡೀ ॥ ೧ ॥ ಬಿರಿ ಬಿರಿ ನೋಡಲು ಮರವನು ಧರ್ಮಜ । ಅರಿತು, ವಲವ, ಸೈರಿಸು ಜನಕೇ॥ ನೆರಳಾಗಿದೆ ಬಹು ಧರ್ಮದ ತರುವಿದು । ಮುರಿವರೆ ನಿನ್ನ ಪ್ರಯೋಜನಕೇ॥ ೨॥ ಎನಲು ಸರಿದ ಖತಿಯನು ನುಂಗುತಲೀ। ಅನಿಳಜ ಪ್ರಾಣೇಶ ವಿಠ್ಠಲಗೇ ॥ ಘನ ಮೊರೆ ಇಡುತಲಿ ಮನೆ ಕಡೆ ಬಂದಳು ಜನುಮೇಜಯನೃಪ ಕೇಳ್ಹೀಗೇ ॥ ೩ ॥ ॥ ೪೨ ॥

॥ ರಾಗ–ನೀಲಾಂಬರಿ, ಅಟ್ಟತಾಳ ॥

ಆರೀಗೆ ಮೊರೆಯಿಡಲೀಗ ಹರೀ । ಪಾರುಗಾಣಿಸು ನೀನೆ ಕಂಸಾರೀ ॥ ಪಲ್ಲ ॥ ಜನನೋಡೆ ಶೀರಿಯ ಸುಲಿದಾವ ಒಮ್ಮೇ । ವನದೊಳು ಸೈಂಧವ ಪಿಡಿದ ಮತ್ತೊಮ್ಮೇ॥ ಘನಕ್ಲೇಶವಾಯಿತು, ಜೀವಿಸುವದೇ ಕಷ್ಟಾ । ಮನಸೀಜಪಿತ ನಿನಗ್ಯಾಕೆ ಕರುಣವಿಲ್ಲ ॥ ೧ ॥ ಧರ್ಮ ಕೆಡುವದೆಂದು ಧರ್ಮಜ ಜರಿದಾ । ತಮ್ಮಣ್ಣಾನಾಜ್ಞದಿನರ ಎನ್ನ ಮರದಾ ॥ ಕರ್ಮವೇನನಲಿ ನಕುಲ ಸಹದೇವರು । ಒಮ್ಮಾಗೂ ಖಳನೊಳು ಎದಿರಾಗಿ ನಿಲ್ಲಾರು ॥ ೨ ॥ ಎಲ್ಲರೊಳಗೆ ಭೀಮ ಬಲ್ಲಿದ ಸುಜೀ । ಯಲ್ಲಿ ಪೇಳುವೆನಿದು

ಬಳಿಕವನಲ್ಲೀ ॥ ಇಲ್ಲವೆ ನಯ ವಿಷ ಕುಡುವೆ ಪ್ರಾಣೇಶ ವಿ। ಠ್ಠಲ್ಲ ನೀ ಗತಿ ನಮೊ ನಮೊ ಪಾದ ಕಮಲಕ್ಕೆ॥ ೩ ॥ ॥ ೪೫ ॥

॥ ಆರ್ಯವೃತ್ತ ॥

ಈ ರೀತಿಲಿ ಮಿಡುಕುತ ಹಗಲು ಕಳದು । ವಾರಿಜಮುಖಿ ಆ ರಾತ್ರಿಯಲೀ ॥ ಮಾರುತಿ ಬಳಿ ಪೋಗುವಳಿಂತಾಡುತ । ಧಾರುಣಿ ಸ್ತ್ರೀಯರ ತೆರದಲ್ಲೀ ॥ ೧ ॥ ॥ ೪೬ ॥

॥ ಪದ, ರಾಗ—ಕನಡ ಕಾಂಬೋಧಿ, ಆದಿತಾಳ ॥

ಹ್ಯಾಂಗೆ ಮಾಡಲಿ ಖಳ ಕಾಡುವಾ ಬೆಳ । ಗಾಗಲು ಭೀಮ ಸೇನು ಮಾಡುವಾ ॥ ಪಲ್ಲ ॥ ಎಂಥವರನು ತಂದು ಏನು ಮಾಡಿದಿ ವಿಧೀ । ಇಂಥವರೆಂದು ಹೇಳಬಾರದೂ ॥ ಕಾಂತಾರ ದೊಳು ವಾಸ ಮಾಡಿದಾಗಿನಕಿಂತಾ । ಬಂತೀ ಇಂದಿಗೆ ಮಹಾ ಕ್ಲೇಶವೂ ॥ ೧ ॥ ಬಾಣೀ ಸಾದವನಲ್ಲಿ ಮಧ್ಯರಾತ್ರಿಯೊಳಗೀ। ಮಾನಿನಿ ಯಾಕ ಪೋಪಳೆಂಬರೋ ॥ ಹೀನಾಮಾತೆ ಕಲ್ಪಿಸು ವರೊ ಹಿಂದೆ ನಗುವರೋ । ಕಾಣಬ್ಯಾಡವ್ರೊ ಸ್ವಾಮಿ ಮನು ಜರೂ ॥ ೨ ॥ ಎಬ್ಬಿಸಲೀ ನಂಬೋನೊ ನಿದ್ರಿಕೆಟ್ಟ ತಂಬೋನೋ । ಒಬ್ಬಳ್ಯಾಕಿಲ್ಲಿ ಬಂದಿ ಎಂಬನೋ ॥ ಅಬ್ಜಾಂಬಕ ಪ್ರಾಣೇಶ ವಿಠ್ಠಲನ ದಯದಿಂದ ಅಬ್ಬರಿಸೀ ಧೈರ್ಯವೆ ಕೊಡುವನೋ ॥ ೩ ॥ ॥ ೪೭ ॥

॥ ಆರ್ಯ ॥

ಆಲೋಚಿಸಿ ಈ ಪರಿ ಪುರುಷನ ಅಥ । ರೋಲಯ ಪಿಡಿ ಯಲು ಎಚ್ಚರಿದೂ ॥ ಹೇಳೆಲಿ ಬಂದ್ಯಾಕೀವ್ಯಾಳೆಯೊಳೆನೆ । ಪೇಳುವಂತೂ ಕೈ ಮುಗಿದೂ ॥ ೧ ॥ ॥ ೫೦ ॥

॥ ಪದ—ಶ್ರೀ ರಾಗ, ಆದಿತಾಳ ॥

ಕಲಿಸಿರೆನ್ನಗ ಬುದ್ಧಿ ಹಿರಿಯೆರಾ । ಜಗದೊಳು ಧೀರಾ ಮೂಳ್ಪ । ಖಳ ಬಹು ಘೋರಾ ॥ ಪಲ್ಲ ॥

॥ ಶ್ಲೋಕ ॥

ಅಂಗನೇ ಖಳನ್ಯಾರೂ । ಘೋರಬಡಿಸುತಿಹನಾರೂ ಅಂಗಲಿ ಚಿದರಿಲ್ಲೀ । ಬುದ್ಧಿಯಂ ಕೊಡುವರಾರೂ ॥ ತಿಂಗಳ। ಮುಖಿ ನಿನ್ನಾ । ಒಡತಿಗೆ ಪೇಳಿಬ್ಯಾಗಾ। ಹಿಂಗಿಕೊ ಭಂಗವನು। ಇಲ್ಲಿ ಏನಾಹದೀಗಾ ॥ ೧ ॥

॥ ಪದ ॥

ರಾಯಾನಂಗನೆಯಲ್ಲಿ ವಿಶ್ವಾಸಾ । ದಲ್ಲಿರಲು ಮೋಸ । ವಾದೆ । ಕೇಳೆನ್ನಧೀಶಾ । ನಾಯಿ ಬುದ್ಧಿಯ ಕೀಚಕನು ಬಂದೂ। ಈಕಿ । ಯಾರೆಂದು । ಕೇಳೆ ಸುರರವಳೆಂದೂ॥ ಆಯುಕ್ತ ನುಡಿಯೆ ಕೇಳದಲ್ಯನ್ನಾ । ಕಾಡಿದನು ಘನ್ನಾ । ಹ್ಯಾಂಗೆ ಇರು ಎಂದಿ ಎನ್ನಾ । ಘಾಯುಮಾಡಿಹ ಗಲ್ಲದಲಿ ನೋಡು । ಅವನ ಹತಮಾಡು । ಸುಳ್ಳು ಶೀಲತ್ವಬೀಡು ॥ ೨ ॥

॥ ಶ್ಲೋಕ ॥

ಎಲೆ ಸಖಿಯೆ ನಿನ್ನ ಕ್ಲೇಶಾ। ಕೇಳುವನು ನಾನು ಅಲ್ಲಾ । ಖಳಬಡಿದರೆ ಒಳಿತೇ ಪೌರುಷವು ಎನಗೆ ಇಲ್ಲಾ ॥ ಕಲಕಲ ನುಡಿವ್ಯಾಕೇ ಕೇಳ್ವರಿಲ್ಲೀಹರೆಲ್ಲಾ । ಕಲುಷವಿಡುವರೆಮಗೇ ಸಾಗು ಇಲ್ಲಿರಲು ಸಲ್ಲಾ ॥ ೩ ॥

॥ ಪದ ॥

ಆರಿಘೇಳಲ್ಯೊ ಕುಂತಿನಂದನಾ। ಎನ್ನಅಭಿಮಾನಾ। ನಿನ್ನ ದಲ್ಲೆವೆ ಪ್ರಾಣಾ । ದಾರಾಳಿಸಿಸುವೆನು ಬಲವಂತಾ । ನಿತ್ಯಾ ನಿಶ್ಚಿಂತಾ। ಪಾಹಿ ಪಾಹಿ ಧೀಮಂತಾ॥ ದೂರು ನೋಡುವದಲ್ಲಾ ಕರುಣಿಸೋ। ಮಾತನಾಲಿಸೋ। ಬಂದಿದ್ದಾಪತ್ತು ಬಿಡಿಸೋ। ಮಾರಮಣನ ದಯ ಪಾತ್ರಾನೆ। ಸರ್ವಜ್ಞಾನೆ। ಸುಮ್ಮನಿರು ವದು ಮಾನೇ॥ ೪॥

॥ ಶ್ಲೋಕ ॥

ಅರಸಿ ಕೇಳ್ ಜೂಜಿನಾಟಾ ಬ್ಯಾಡೆಂದೆ ಕೇಳಲಿಲ್ಲಾ । ಅರಸಿಗೆ ನಾ ಮೊದಲೆ ಈ ಬಗೆಯು ಆಯಿತಲ್ಲಾ ॥ ಭರದಲಿ ಕೀಚಕನಾ ಕೊಲ್ವೆನೆಂದವಡಿ ಕಚ್ಚೀ । ಮರವನು ನೋಡಲ್ಕೆ ಬ್ಯಾಡೆಂದ ಕೋಪಪಟ್ಟೀ ॥ ೫ ॥

॥ ಪದ ॥

ಲೋಕದೊಳಗೆ ಒಬ್ಬಗೊಬ್ಬಳೂ। ಇರಲು ಪೊರೆವರೂ। ನಾ ಒಬ್ಬಳಗೈವರೂ। ಯಾಕೆ ಬಂದಿರಿ ನೀವು ಗಂಡಾರೋ। ಎಂಥ ಭಂಡಾರೊ॥ ನಿನ್ನ ಶೌರ್ಯತ್ವ ತೋರೊ। ಕಾಕುಬಳಿಸ ಬ್ಯಾಡಾ ಎನ್ನೊಳೂ। ಪರಮದಯಾಳೂ। ಹ್ಯಾಂಗೆ ಇರು ಎಂದಿ ಪೇಳೂ। ಲೋಕೇಶ ಎನ್ಯಾಕೆ ಸೃಜಿಸಿದಾ। ಎಷ್ಟಸ್ನಲಿ ಪೇದಾ ನೀನೆ ಗತಿ ಕಂಡ್ಯಾ ಶ್ರೀದಾ ॥ ೬ ॥

॥ ಶ್ಲೋಕ ॥

ಎಲೆ ಪಂಡರ ಒಡನೇ ಪುಟ್ಟದವ ನಾನು ಭಂಡಾ । ತಿಳಿದ ಪರಿಯಲಾಡೂ ಕೋಪವೆನಗಿಲ್ಲ ಕಂಡ್ಯಾ ॥ ಲಲನಿಂದಿನ

ಮೊದಲೂ ನಾಲ್ವರಿಗೆ ಅರಸಿಯಾಗೂ । ಹಲವು ನುಡಿಯು ದೆನಗೆ । ನಿನ್ನ ಹಳಿಹರಿಯು ಕೂಗೂ ॥ ೭ ॥

॥ ಪದ ॥

ರಾಯನೆಂದರೆ ನಮ್ಮ ಭಾವನೇ । ಜಗಕೊಬ್ಬನೇ । ನಿಮ್ಮ ನ್ನೋಡಿಸಿ ಅವನೇ । ತಾಯ್ಯೆದಿದ ಕೀಚಕಗೆ ಎನ್ನಾ । ಕೊಟ್ಟರಿ ಘನ್ನಾ ॥ ವೀರಕ್ತರು ನೀವು ಮುನ್ನಾ । ಕಾಯಬೇಡೂವೆ ಕೂಡಿ ದಾಗೆನಾ । ಎನ್ನ ಅವಗುಣಾ । ಎಣಿಸಲಿಬ್ಯಾಡ ಪ್ರಾಣಾ । ನಾಯಾಕಾ ಪ್ರಾಣೇಶ । ವಿಠಲನ್ನಾ ದೂತ ಪಾವನ್ನಾ । ಆಜ್ಞಾ ಪಾಲಿಸು ಇನ್ನಾ ॥ ೮ ॥ ॥ ೫೮ ॥

॥ ರಾಗ–ಭೈರವಿ, ಅಟ್ಟತಾಳ ॥

ಹೇಳೂವ ವಾರ್ತಿಯ ಕೇಳೂತ ಕೋಪವ । ತಾಳೂತ ಊರಿದು । ಖೂಳಿಖೂಳಿಸುತ । ಸೀಳಲ್ಯೋ ನಾಲಿಗಿ ಕೀಳಲ್ಯೋ ಕುಣಿಗೆ । ಹೂಳಲ್ಯೋನೆಲಕ ತೂಳಿಯಲ್ಯೋ ॥ ಹೇಳೆ ಸಖಿ ನಿನ ಬಾಳಿವಿಗೇಡನ । ಉಳಿಸದೆ ಧಳ । ಧೂಳಿಯನೆ ಮಾಡಿ । ಹೋಳಿಯನಾಡುವೆ । ತೀಳಿ ಈ ಮಾತೆಂದನೀಳತನಯ ಚಪ್ಪಾಳಿಡುತಾ ॥ ೧ ॥ ॥ ೫೯ ॥

॥ ಆರ್ಯ ॥

ಹೆಂಗೆಳೆ ವೇಷದಿ ಸಂಜಿಲಿ ಕೊಲ್ಲುವೆ । ಮಂಗನ ಗರುಡಿಗೆ ಬರಹೇಳೂ ॥ ಅಂಗನೆ ಚಿಂತ್ಯಾಕೆಂದೆತ್ತಿಪ್ಪೀ । ಕಂಗಳು ವರಸಿದ ಕರುಣಾಳೂ ॥ ೧ ॥ ಬೆಳಗಿತು ದ್ರೌಪದಿ ಕಂಡನು ಕೀಚಕ । ನಳಿನ ಮುಖಿಯೆ ದಯಮಾಡೆಂದಾ ॥ ಜಲಜ ಶರವು ಯಮನಾಯಿತು ನಿನ್ನಿನಿ । ರಳು ಯುಗವಾಯಿತು

ಕೇಳೆಂದಾ ॥ ೨ ॥ ಕುಸುಮಾಸ್ತ್ರ ಯಮನು ಬಂಧುಗಳಂ
ಗಳು । ವಿಷಪೀಯೂಷ ಅಣಿಯ ಕಲ್ಲೊ ॥ ಬಿಸಿಯಾಹವು
ನೀನಾಡಿದಿ ನಿಜಪರ । ಶಶಿಮುಖಿ ಬಯಸಲು ಖಳ ಕೇಳೂ ॥ ೩ ॥
ಈ ಶಾಸ್ತ್ರ ಪುರಾಣ್ಯಾಕೆಲೆ ಸುಂದರಿ । ಈ ಸಮಯಕೆ ನಿನ
ಸಂಗವನೂ ॥ ಲೇಸಾಗಿತ್ತರೆ ಬಹು ಕಾಲಕು ನಿನ । ದಾಸ
ನಾಗಿ ನಾ ಹೊಂದಿಹೆನೂ ॥ ೪ ॥ ಎನಲು ನಗುತ ಮರುಳಾ
ದೆಲೊ ಗರುಡೀ । ಮನೆಯೊಳಿರಳೆ ಇರು ಎಂದಲ್ಲೀ ॥ ಘನ
ಮುದದಿಂದಲೀ ಕೃತ್ಯವನೆಲ್ಲಾ । ಅನಿಳಗೆ ತ್ವರ ಪೇಳಿದ
ಳಲ್ಲೀ ॥ ೫ ॥ ಯತ್ನಕೆ ಸಹಯಾದನು ಹರಿ ನೋಡೆಂ । ದತ್ತಾ
ಖಳ ಸುಖ ಸುರಿಯುತಲೀ ॥ ಹೊತ್ತಾಲಿಸುತಿರೆ ಭುಜಚಪ್ಪ
ರಿಸುತ । ಇತ್ತಲು ಭೀಮನು ತವಕದಲೀ ॥ ೬ ॥ ॥ ೬೫ ॥

॥ ರಾಗ—ಭೈರವಿ, ಅಟ್ಟತಾಳ ॥

ಭೀಮ ಶ್ಯಾಮ । ಕಾಮಿಯಾದನೂ ॥ ಪಲ್ಲ ॥ ಹಂಗಳೆ
ನೂತನ । ಶ್ರೀಂಗಾರವಾದನು । ಉಂಗುರಗೂದಲೊ । ಳಿಂಗಿಸಿ
ರಾಗಟ । ಹಿಂಗೂವತ್ತ್ಯರ ಕ । ಳಂಗನ ವೇಣಿಗೆ । ರಂಗನಿಕ್ಕಿದ
ಚವುರಿಂಗೆ ಗೊಂಡೆಯೂ ॥ ತಿಂಗಳಧಾರ್‍ಪಣಿ । ಮಂಗಾಳ
ಕುಂಕುಮ । ಕಂಗಳಿಗೆ ಕಪ್ಪು । ಭಂಗಾರ ದೋಲಿಯು ।
ಜಂಗು ಬ್ಯಾಳೀಸರ । ಅಂಗಾಜ ಸತೀಯು । ಭಂಗೀಪ ಚಲೂವ
ಅಂಗವಾದ ॥ ೧ ॥ ಏಕಾವಳಿ ಸರ । ತೂಕದ ಸರಿಗೆ । ಲೋಕ
ದೊಳಿಲ್ಲದ ಬೇಕಾದ ಭಾಪುರೆ । ಹಾಕೀದ ಚಿತ್ರ ಕಂಚೂಕವ
ಬಿಗೀದ । ನೇಕ ಪರಿವಸ್ತ್ರವ್ರಾಕರಕೇ ॥ ಆ ಕಂಠಿರವನ
ನೋ । ಲಿ ॥ ಪ ಕಟ ಪಟ್ಟ । ನೊಕೆಯಿಳೀಸೀರಿ । ಮೂಖ ಹರಿ

ದ್ರಸಾ । ಸೀಕಾದಿ ಮೂಗೂತಿ । ಯು ಕಟ್ಟಿದಾಗಿಳಿ । ಯಾ
ಕಾನಾ ಬಾವುಲಿಯೂ ಕಿವಿಗೇ ॥ ೨ ॥ ಲುಲ್ಲುರುಳೀ ಪದ ।
ದಲ್ಲಿ ಕಡಗಾವು । ಘಲ್ಲೆಂಬೊಗೆಜ್ಜಿಯು ಬಲ್ಲೀದ ಶಬ್ದವು ।
ಎಲ್ಲೆಲ್ಲಿ ಜಗದೋಳಿಲ್ಲದ ಪರೀಯು । ಪಿಲ್ಲ್ಯಾವನ್ನು ಬಟ್ಟನಲ್ಲಿ
ಟ್ಟಾನೋ ॥ ಕೊಲ್ಲೂವೆನವ ಅ । ವಲ್ಲಿಹನೆನುತ । ಹಲ್ಲು ತಿನು
ತಾಲಿ । ಸೊಲ್ಲೂ ಸೊಲ್ಲೀಗೆ ತಾ । ಕುಲ್ಲೂತ ಪಾತಕಿ । ದ್ದಲ್ಲಿಗೆ
ನಡದ । ನಿಲ್ಲಾದೆ ದನುಜ । ದಲ್ಲಾಣನೂ ॥ ೩ ॥ ॥ ೭೮ ॥

॥ ವೃತ್ತ ಪದ್ಯ ॥

ಸಖಿ ಮುಟ್ಟದಳು ಮಾತಿಗೆಂದು ಕೀಚಕನೂ । ಸುಖ
ಸುರಿದು ದಿವ್ಯ ವಸ್ತ್ರಾಭರಣಗಳನೂ ॥ ಇಕೋ ನೋಡೆ ನಿನ
ಗಾಗಿ ಮೆಚ್ಚಿ ತಂದಿಹೆನೂ । ತಕೋ ಎಂದು ಭೀಮನೊಳು
ಮಾತಾಡುತಿಹನೂ ॥ ೧ ॥ ॥ ೭೯ ॥

॥ ಆರ್ಯೆ ॥

ಬಿಗಿದೆಲೆ ಹುರಿಯಿಲ್ಲದ ಹಗ್ಗದಿ ಸಖಿ । ಹೊಗಿಯಿಲ್ಲದ
ಬೆಂಕಿಲಿ ಸುಟ್ಟೇ ॥ ಮಿಗಿಲಾಯುಧವಿಲ್ಲದೆ ಎದಿ ಶೀಳಿದಿ ।
ನಗಿ ಮಾತಾಡೆಲೆ ಮನಮುಟ್ಟೇ ॥ ೧ ॥ ನರಲೋಕದಿ ನಾ
ಬಲ್ಲೆನು ಎನಸರಿ । ಪುರುಷರು ಸುರಲೋಕದೊಳುಂಟೇ ॥
ಮರಿಯದೆ ಪೇಳಲ್ಲಿರುವಳು ಯಾಕೆಂ । ದರೆ ನನನಿನಗಿಂದಿಗೆ
ಗಂಟೇ ॥ ೨ ॥ ಎನಗೆ ಸೋಲಧೆಂಗಸರೆಲ್ಲಿಲ್ಲೆಲೆ । ಜನನ
ಕಾಲ ಮಹದರ್ಶಿಯೇನೋ ॥ ಘನತರ ಕನ್ಯಾದಾನವ
ನಾ ಹಿಂ । ದಿನ ಜನ್ಮದಿ ಮಾಡಿದೆನೇನೋ ॥ ೩ ॥ ಎನಲು
ಎನಗೆ ತಕ್ಕವನೀ ಸ್ಯೆವಂ । ದಿನ ನಾ ಒಬ್ಬಗೆ ಸೋತಿಲ್ಲಾ ॥

ಮನಕೆ ತಂದು ನೋಡೆನ್ನ ಹೆಣ್ಣುತನ । ವೆನೆ ತಿಳಿಯದೆ
ಹಿಗ್ಗುತ ಖುಲ್ಲಾ ॥ ೪ ॥ ಬಾ ಕುಳ್ಳಿರು ಬೆರಸೆಲೆ ಕಾವ
ಕಲಹ । ವ್ಯಾಕಾಲಸ್ಯ ಎನುತ ಎದಿಗೇ ॥ ತಾ ಕೈ ಚಾಚ
ಲು ಬಟುಕುಚ ಕಾಣದೆ । ಕಾಕುಮನದಿ ಎಂಬುವ
ಹೀಗೆ ॥ ೫ ॥ ॥ ೭೪ ॥

॥ ರಾಗ–ಸೌರಾಷ್ಟ್ರ, ಆದಿತಾಳ ॥

ಎದಿಯಲ್ಲಿ ಮೊಲೆ ಇಲ್ಲ ಕಠಿಣ ವಿಹದು ಕಂಡೂ
ಬೆದರೂವೆನಾರೆ ಮೊಕ್ಕನಾರೇ ॥ ಒದಗೀದಾ ಎನ್ನ ಪಾಲೀ
ಗೆಂದು ಚಿಂತಿಸುತ ಗಡಾ । ಗದ ನಡುಗುತಾ ಹಿಂದ
ಜ್ಜಾರೇ ॥ ೧ ॥ ॥ ೭೫ ॥

॥ ಆರ್ಯ ॥

ನೆರದೇ ಬಿಡು ನಾ ಬಿಡೆನೆಂದಿಡಿಯಲು । ತುರುಬಿನ
ಕೂದಲು ಮಾರುತನೂ ॥ ಮರಣವೇ ಈ ಕ್ಷಣ ಒದಗಿತು
ಎಂತಲ । ಸುರ ಈ ಪರಿಯಲಿ ಕೂಗುವನೂ ॥ ೧ ॥ ॥ ೭೬ ॥

॥ ರಾಗ–ಕನ್ನಡ ಕಾಂಬೋಧಿ, ಆದಿತಾಳ ॥

ಬಿಡು ನಾರೀ ಬಿಡು ನಾರೀ ॥ ಬಡವನ ಮಗ ನಿನಾ
ದಿಡಿಗಿಗಾರೆನಾ ॥ ಪಲ್ಲ ॥ ಪರಸತಿ ಸಂಗಡ । ಸರಸವು
ಎಲ್ಲಿದು ॥ ಹಿರಿಯರು ಮೆಚ್ಚರು ಕರುಣದಿಂದ ಮುಡಿ ॥ ೧ ॥
ಮಡದಿ ಕೇಳು ನಿ । ನ್ನಡಿಗೆರಗುವೆ ಖತಿ ॥ ಹಿಡಿಯದೆ ಮನ
ದಲಿ । ಹುಡುಗನ ಮಾತಿಗೆ ॥ ೨ ॥ ನಾನು ಸಂಪೂಸಕ ।
ಮಾಣದೆ ಪೇಳುವೆ ॥ ಪ್ರಾಣೇಶ ವಿಠಲನ । ಆಣೆಲೆ
ದಯದಿಂ ॥ ೩ ॥ ॥ ೭೭ ॥

॥ ಆರ್ಯ ॥

ಖಳ ಎನಗಾತುರವಾಗಿದೆ ಬಾ ನಿ। ನ್ನಲಿ ಬಹುರತಿ ಇಟ್ಟಹ ನೆಂದೂ ॥ ಹಲ್ಗಡೆಯುತ ಕೆಂಗಣ್ಣಿಲಿ ನೋಡೆಂವ । ನೊಳು ಮಾಡುವ ಬಗೆ ಕೇಳಿಂದೂ ॥ ೧ ॥ ॥ ೮೦ ॥

॥ ರಾಗ–ಭೈರವಿ, ಅಟ್ಟತಾಳ ॥

ಕೆಟ್ಟ ಜಾತೀ ನಿನ । ಗಿಷ್ಟೊಂದು ಸೊಕ್ಕೇ ಎ । ಲ್ಲಿಟ್ಟೇದ್ದಿ ಬುದ್ಧೀಯು । ಕಟ್ಟಡು ಸೊಗಸ । ನಷ್ಟ ಮಾಡೂವೆ ಸೊ। ಹುಟ್ಟದವರೀಗೆ । ಅಟ್ಟಸು ಸುದ್ದೀಯು । ಘಟ್ಟನೆಂದೂ ॥ ಕುಟ್ಟೇದ ಎದೀಗೆ । ಹೊಟ್ಟೇಯ ಬಗದು । ಬಿಷ್ಟಾನುಧರೀಗೆ । ಕಟ್ಟಾಲೆ ಇದ್ದಂತೆ । ದೃಷ್ಟಿ ಸಂಗನೆ ಎಂದು । ಇಟ್ಟಲ್ಲೀ ಕುಣಪ । ನೆಟ್ಟಾನೆ ಬಂದೂ ತನ್ನಾರಾಂವಿಗೇ ॥ ೧ ॥ ॥ ೮೧ ॥

॥ ಆರ್ಯ ॥

ಮುಚ್ಚದಿವನ ನ್ಯುತಿ ವಿವರವ ತಿಳಿಸೆಲೆ । ಬಿಚ್ಚಿಸು ಧಿಷ್ಟಿ ಗೆನಲು ಬ್ಯಾಗಾ ॥ ಉಚ್ಚರಿಸಲ್ಕಳಿದವರಜನೆಂದೂ । ಹೆಚ್ಚು ಕ್ಲೇಶ ಬಡುತಿರಲಾಗಾ ॥ ೧ ॥ ॥ ೮೨ ॥

॥ ವೃತ್ತ ಪದ್ಯ ॥

ಅವಿವೇಕಿ ಕೀಚ । ಕನ ತಮ್ಮಗಳು ಬಂದೂ । ಇವಳಿಂದ ಯಮಲೋಕವೈದಿದಣ್ಣನೆಂದೂ ॥ ಇವನ ಸಂಗಡ ಇವಳ ಹಾಕ ಬೇಕೆಂದೂ। ತವಕ ದ್ರೌಪದಿ ವೈಯುಲಳುವಲಿಂತೆಂದೂ॥೧॥೮೩॥

॥ ಆರ್ಯ ॥

ಎಲೆ ಗೀರ್ವಾಣರೆ ಎಳಿರ್ರ್ಯೊ ಒಯ್ವರು । ಖಳರೆ ನನ್ನನ್ನು, ನಡುವಿರುಳಿನುತಾ ॥ ಹಲುಬುವ ಧ್ವನಿ ಕೇಳಿಚ್ಚತ್ತು

ಮರುತ । ಹಲ್ಗಡೆಯುತ ಪೆನ್ಮರಕೊಳುತಾ ॥ ೧ ॥ ನಾಯಿ
ಗಳೆಲ್ಲೋಡೀಗುವಿರೆಂದೊದರಲು । ಬಾಯಿಬಿಡುತ ಹೋಗಲಿ
ಬಿಡಿರೋ ॥ ಈ ಯಂಗಸಿ ಬಂದಸು ಬಲು ಪಾಪಿ ವ
ಕಾಯಸು ಕೈಯ್ಯಂದೋಡುವರೋ ॥ ೨ ॥ ತಲೆಬಿಟ್ಟದಿ ಘಟ್ಟ
ಸಿ ಸಿಡಿದೋಡುವ । ಖಳರಸು ಕಂಡು ನಗುತ ಭೀಮಾ ॥
ಸುಲಭದಿ ಸೂರ್ಯವರ ಸಂಹರಿಸುತ । ಲಲನಿಗೆ ಮಾಡಿದ
ಬಹು ಪ್ರೇಮಾ ॥ ೩ ॥ ಭಯತುಂಬಿತು ಬೆಳಗಾಗಲು ಪುರ
ದೊಳು । ಸೈರಂಧ್ರಿಯು ಕೊಲಿಸಿವಳೆಂದೂ ॥ ದಯಹೀನ
ವಳಿನ್ನೂರಳಗಿದ್ದರೆ । ಜಯವಂತೆಂಬರು ಜನರಂದೂ ॥ ೪ ॥
ಕೀಚಕರಳಿದವಳೀಕೆಂತೋರುತ । ಚಾಚುವರಂಗುಲಿ ಕೆಲ
ಕೆಲರೂ ॥ ನಾಟಿಕೆ ಇಲ್ಲವೆ ನಮಗ್ಯಾಕೊಬ್ಬರ । ಯೋಚಸಿ
ಯಂಬರು ಕೆಲಕೆಲರೂ ॥ ೫ ॥ ಬೀದಿಯೊಳಗೆ ದ್ರೌಪದಿ ಬರೆ
ಭಯದಿಂ । ಥಾದಿಯ ಬಿಡಿಸೊರು ಕಲಕೆಲರೂ ॥ ಓದನ
ವಸನಗಳೀಕೆ ಕೊಡುವಳೆಂ । ದಾದರ ಮಾಳ್ಪರು ಕೆಲಕೆಲ
ರೂ ॥ ೬ ॥ ಇವರೇ ಕೊಟ್ಟಹರೆಂತೆಲೆ ಈ ಪುರ । ಅವಸಿಪ
ಗೆಂಬರು ಕೆಲಕಲರೂ ॥ ಅವಿವೇಕಿಗಳರೆ ತಿಳಿಯದಲೆಂಬಿರಿ
ಸವಿಮಾತಲ್ಲೆಂಬರು ಕೆಲರೂ ॥ ೭ ॥ ಜನರಾಡುವ ಮಾತಾ
ಲಿಸಿ ಕೇಳುತ । ಘನ ಹರುಷದಿ ಭೀಮನ ಪದಕೇ ॥ ಮನ
ದೊಳು ನಮಿಸುತ ಬಂದಳು ಶ್ರೀ ಕೃ । ಷ್ಣನ ಸ್ಮರಿಸುತ ತನ
ಮಂದಿರಕೇ ॥ ೮ ॥ ಗದ್ದೆವು ಪ್ರಾಣೇಶ ವಿಠಲನ ಪದಯುಗ
ಪದ್ಮದ ದಯದಿಂದಜ್ಞಾತಾ ॥ ಒದ್ದೆಬಿಡುವೆ ದುರ್ಯೋಧನ
ಕುಲವೆಂ । ದಿದ್ದಾದಿನ ಭೀಮನು ನಗುತಾ ॥ ೯ ॥ ಪ್ರಾಣೇಶ

ವಿಠಲನ ದಯದಿಂಧೇಳಿದ । ಈ ನುಡಿ ಪಾಡುತ ಕೇಳ್ದರಿಗೇ ॥ ಸೂನು ಮೊದಲು ಸಂಪತ್ತಿಹೆದಲ್ಲೀ । ತಾನೆ ಒಲಿವ ಶ್ರೀಶನು ಕೊನಿಗೇ ॥ ೧೦ ॥ ಮಂಗಳ ಝುಷಕೂರ್ಮಕಿಟ ನರ ಸಿಂಹಗೆ । ಮಂಗಳ ವಟು ಭಾರ್ಗವ ರಾಮಾ ॥ ಮಂಗಳ ಕೃಷ್ಣಗೆ ಬುದ್ಧ ಕಲಿಕಿಗೇ । ಮಂಗಳ ಪ್ರಾಣೇಶ ವಿಠ್ಠಲಗೇ ॥ ೧೧ ॥ ಅಂತೂ ಪದಗಳು (೯೪)

॥ ಶ್ರೀ ಗುರು ಮಧ್ವೇಶ ಕೃಷ್ಣಾರ್ಪಣಮಸ್ತು ॥

။

ဂ
ဂ
ဂ
ဂ
ဂ
ဂ
ဂ
ဂ

ಮ॥ ರಾ॥ ರಾ॥

೧೪೭. ಶ್ರೀನಿರಾವಜಿ ಮುರಡಿ, B.A , L.L.B. ಮುನಸಿಫ,
ಹದಗಾಂವಜಿ, ನಾಂದೇಡ.

೧೪೮. ವೆಂಕಟರಮಣದಾಸ, ಶ್ಯಾನಭೋಗನ ಹೊಳ್ಳಿ, ಕೊಲ್ಲಾರ.

೧೪೯. ಹುಲಗೇರಿ ರಾಮರಾವ, ಸೀಗೇದಾರ ಅಲಂಪೂರ.

೧೫೦. ವೆಂಕೋಬರಾವ, ಅಲಂಪೂರಕರ.

೧೫೧. ಜಹಗೀರದಾರ, ನಾರಾಯಣಪುರ.

೧೫೨. ಶ್ರೀನಿವಾಸರಾವ ಕೆ॥ ಗುಡಿಹಾಳ.

೧೫೩. ಎಸ್. ವೇದವ್ಯಾಸಾಚಾರ್ಯ, ಸಬ್ ಓವರ್‌ಸಿಯರ್,
P.W D. ಪೆರಿಯಪಟ್ಟ.

೧೫೪. ರಾಮದಾಸ, ಪಕಂದುರ್ಗ, ತಾ. ಕುಷ್ಟಗಿ.

ಸುಮಾರು ೫೦ ಜನ ಪೋಷಕರು ತಮ್ಮ ವರ್ಗಣಿ ರೂಪಾಯಿ ಕಳುಹಿಸಿಲ್ಲ. ಮುಂದಿನ ಕೆಲಸಕ್ಕೆ ಅಡ್ಡಿಯಾಗಿರುವದು. ಕಾರಣ, ತ್ವರೆ ಮಾಡಿ ಬಾಕಿಇಟ್ಟುಕೊಂಡವರು ಕಳುಹಿಸುವುದೆಂದು ವಿನಂತಿ. ಕೆಲವು ಮಹನೀಯರು ವ್ಹಿ. ಪಿ. ಸಹ ಪರತಮಾಡಿರುವರು. ಇದರಿಂದಲೂ ಬಹು ಹಾನಿಯಾಗಿರುವದು. ಈ ವರಿಗೆ ಕೈಲಿ (೧೧೫೦) ರೂ. ವೆಚ್ಚವಾಗಿ, ೫೦೦ಕ್ಕೂ ಬಹು ಕಠಿಣದಿಂದ ವಸೂಲ ಆಗಿರುವವು. ೫೦ ರೂ. ಸುಮಾರು V. P. ಪರತ ಆದವು ಪೋಷ್ಟೇಜಿನಲ್ಲಿ ನಷ್ಟವಾಗಿದೆ ಕಾರಣ ಇನ್ನಾದರೂ ದಯವಿಟ್ಟು ಸರ್ವರೂ ತ್ವರಾ ರಕಂ ಕಳಿಸಬೇಕಾಗಿ ವಿನಂತಿ.

ಪ್ರಕಾಶಕ.

Printed at the Dharma Prakash Press, Mangalore.